(*b*) the names of Villages where there is no electricity supply ; (Statistical figures and village-wise information may please be furnished) ;

(*c*) the number of Villages where there are village Panchayat Head Quarters and in which there are no supply of electricty (Statistical figures and Villagewise information may please be furnished) ;

(*d*) the number of villages to which sanction of Electricity Supply has been accorded during the year 1981-82, and the names of those Villages ? (Statistical Figures and Villagewise information may please be furnished) ?

SRI G. H. ASWATHA REDDY (Minister of State for Power).—

(*a*) Electricity supply has been provided to 56 Villages in Kalaghatagi Taluk of Dharwad District up to end of February, 1982. (Names of Villages are furnished in Annexure No. 1 laid on the table of the House) ;

(*b*) Electricity has not been supplied to 29 villages as per figures up to end of February, 1982. (Names of Villages are given in Annexure No. 2 laid on the table of the House) ;

(*c*) The number of Villages having Head Quarters-2 They are (1) Beeravalli (2) Nellihalli.

(*d*) Electrification of Kalaghatagi Taluk has been sanctioned under Rural Electrification Corporation Scheme. According to this Electricity would be supplied to the 29 non-electrified villages stage by stage within a peripd of five years commencing from 1981-82. 9 Villages during 1981-82, 3 villages have already been electrified. (Names of 9 villages are given in Annexure 3 laid on the table of the House).

Calling attention to a matter of urgent Public importance.

re : Death of a Student in the General Hostal, Chickmagalur due to food poisining.

ಶ್ರೀ ಸಿ. ಎ. ಚುದ್ರೇಗೌಡ.—ಮಾನ್ಯ ಅಧ್ಯಕ್ಷರೇ, ಚಿಕ್ಕಮಗಳೂರಿನಲ್ಲಿರತಕ್ಕ ಜನರಲ್ ಹಾಸ್ಟೆಲ್ ನಲ್ಲಿ ವಿಷಪೂರಿತ ಆಹಾರವನ್ನು ಸೇವಿಸಿದ್ದ ಕಾರಣ ಅಲ್ಲಿ ಸಾವುನೋವುಗಳಾಗಿದೆ. ಇದರ ಬಗ್ಗೆ ನಾನು ಒಂದು ಗಮನಸೆಳೆಯುವ ಸೂಚನೆಯನ್ನು ಕಳುಹಿಸಿಕೊಟ್ಟಿದ್ದೆ. ದಯವಿಟ್ಟು ಸರ್ಕಾರದವರು ಉತ್ತರ ಕೊಡಬೇಕು.

SRI P. VENKATARAMANA (Minister for Social Welfare and Backword Classes).—Sir, on.....

ಶ್ರೀ ಪಂಪಾವತಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರಿಂದ ನಮಗೆ ಕನ್ನಡದಲ್ಲಿ ಉತ್ತರವನ್ನು ಕೊಡಿಸಬೇಕು.....

(ಅಧ್ಯಕ್ಷರು ಪೀಠವನ್ನಲಂಕರಿಸಿದರು)

ಅಧ್ಯಕ್ಷರು.—ನಿಮಗೆ ಏನಾದರೂ ಬೇಕಾದರ ನನ್ನನ್ನು ಕೇಳಿ.

ಶ್ರೀ ಪಂಪಾವತಿ—ಸ್ವಾಮಿ, ನಮಗೆ ಸಚಿವರು ಕನ್ನಡದಲ್ಲಿ ಉತ್ತರ ಕೊಡಬೇಕೆಂದು ಕೇಳಿ ಕೊಂಡಿದ್ದೆವು. ಆದರಂತೆ ತಾವು ವ್ಯವಸ್ಥೆ ಮಾಡಿದ್ದೀರಿ. ಆದರೆ ಇವತ್ತು ಮತ್ತೆ ಆಂಗ್ಲ ಭಾಷೆಯಲ್ಲೇ ಹೇಳಿಕೆ ಬರುತ್ತಿದೆ. ಆಗಿಂದಾಗ್ಗೆ ಈರೀತಿ ಇಂಗ್ಲಿಷ್‌ನಲ್ಲಿ ಹೇಳಿಕೆಗಳು ಬರುತ್ತಲೇ ಇರುವುದು, ನಾವೂ ಕೂಡ ಪದೇ ಪದೆ ಎದ್ದುನಿಂತು ಉತ್ತರವನ್ನು ಕನ್ನಡದಲ್ಲಿ ಕೊಡಿ ಎಂದು ಕೇಳುತ್ತಿರುವುದು, ಅಷ್ಟೊಂದು ಸರಿಯಾದುದಲ್ಲ. ಇನ್ನು ಮುಂದೆ ನಮಗೆ ಒದಗಿಸಿಕೊಡತಕ್ಕ ಎಲ್ಲ ಹೇಳಿಕೆಗಳನ್ನು ಪತ್ರ ಗಳನ್ನೂ ಕನ್ನಡದಲ್ಲೇ ಕೊಡಿಸುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ವಿನಯದಿಂದ ತಮ್ಮಲ್ಲಿ ಕೇಳಿ ಕೊಳ್ಳುತ್ತೇನೆ.

SRI P. VENKATARAMANA (Minister for Social Welfare and Backward Classes).—On 19-6-1982 one of the inmates in the Government Pre-matric Girls Hostel, Chickmagalur by name Kum. Rukmini, V Standard, went home to her village, Mylimane which is 10 miles from Chickmagalur, after having morning meals along with other inmates. It was learnt that she started vomiting in her house at Mylimane and she was brought back to Chickmagalur by her parents in a serious condition on 20-6-1982 (i.e., the next day) at night. She was straighway admitted to the Government Hospital at Chickmagalur and expired at around 11-50 A. M on 21-6-1982. As per the Doctors' opinion the death was due to food poisoning resulting in 'Kidney Failure and Dehydration'.

On 21-6-1982, 12 girls of the same hostel, started vomiting and were immediately admitted to Government Hospital at 10-00 A.M. and they were given Glucoseintravenus. They are all improving and their condition is reported to be satisfactory. On the same day *i e.*, on 21-6-1982 another batch of 25 girls from the same hostel also started vomiting and they were admitted to Government Hospital, Chickmagalur and given treatment and their condition is reported to be satisfactory. On the same day 7 boarders from the Govt. Boys (Pre-matric) hostel Chickmagalur were also admitted to Government Hospital, for observation and their condition is reported to be satisfactory.

The cause of food poisoning is reported to be bad quality of rice supplied by the Janatha Bazar to the Government hosel. Police has already seized all the rice stock from hostels at Chickmagalur town. The rice sample as well as the vomit samples are reported to have been sent to the Forensic Science Laboratory, Bangalore for analysis.

The Patients, admitted to the Hospital are fedwith bread and Milk at present.

As a precautionary measure 45 inmates of Girls Hostel, Chickmagalur were treated as out patients and discharged. Doctors who attended the patients have not clearly expressed the reason for the incidents and suspected food poisoning due to bad quality of rice.

The food articles supplied by Janatha Bazar have been seiged and fresh food articles supplied to the Hostel which is purchased from open market.

As a precautionary measure all the Tahsildars and Block Development Officers in the district have been asked to visit all the Hostels in their area and to check the quality of food grains. They have been instructed to replace the food articles if found necessary.

The Superintendent and two Cook. One Kitchen servant working in Girls Hostel Chickmagalur have been placed under suspension with effect from 22-6-1982. Alternative arrangements have been made to run the hostel and fresh food articles purchased for the Hostel.

The Divisional Commissioner, Mysore will be requested to conduct the detailed enquiry in the matter and necessary action will be taken against the erring persons.

೪-೩೦ ಪಿ.ಎಂ.

† ಶ್ರೀ ಸಿ. ಎ. ಚಂದ್ರೇಗೌಡ (ಚಿಕ್ಕಮಗಳೂರು).—ಸನ್ಮಾನ್ಯ ಅಧ್ಯಕ್ಷರೇ, ಚಿಕ್ಕಮಗಳೂರಿನಲ್ಲಿ ಬಡವರಿಗಾಗಿ ಜನರಲ್ ಹಾಸ್ಟೆಲ್ ಪಡೆಯುತ್ತಿದೆ. ಇಲ್ಲಿ ನಡೆದ ಘಟನೆಯ ಬಗ್ಗೆ ತುಂಬಾ ವಿಷಾದದಿಂದ ಹೇಳಬೇಕಾಗಿದೆ. ಈವತ್ತಿನ ದಿವಸ ಮಾನ್ಯ ಮಂತ್ರಿಗಳಿಗೆ ಅಧಿಕಾರಿಗಳು ಏನು ಮಾಹಿತಿಯನ್ನು ಒದಗಿಸಿದ್ದಾರೆ, ಇದು ನಾನು ತಿಳಿದ ಮಟ್ಟಿಗೆ ಸತ್ಯಕ್ಕೆ ದೂರವಾದ ವಿಚಾರವಾಗಿರುತ್ತದೆ. ಅನೇಕ ವಿಚಾರಗಳನ್ನು ಮುಚ್ಚುವ ಸಲುವಾಗಿ ಈ ಕೆಲವು ವಿಚಾರಗಳನ್ನು ಕೊಟ್ಟಿದ್ದಾರೆಂದು ಹೇಳಬೇಕಾಗಿದೆ. ಈವತ್ತು ಒಂದು ಹುಡುಗಿಯನ್ನು ೧೦ ಮೈಲಿ ದೂರದಲ್ಲಿರತಕ್ಕಂಥ ಆಕೆಯ ಸ್ವಂತ ಮನೆಗೆ ಕರೆದು ಕೊಂಡು ಹೋದಾಗ ಅಲ್ಲಿ ತೆಗೆದುಕೊಂಡಂತ ಆಹಾರದಿಂದ ವಾಂತಿ ಪ್ರಾರಂಭವಾಗಿ ಆಕೆಯ ತಂದೆ ತಾಯಿಗಳು ಆಸ್ಪತ್ರೆಗೆ ಅಡ್ಮಿಟ್ ಮಾಡಿರುತ್ತಾರೆಂದು, ಈ ಒಂದು ರಿಪೋರ್ಟ್‌ನಲ್ಲಿ ಕೊಟ್ಟಿರುತ್ತಾರೆ. ಅವತ್ತಿನದಿವಸ ಜನರಲ್ ಹಾಸ್ಟೆಲ್‌ನಲ್ಲಿ ಆಹಾರವನ್ನು ತೆಗೆದುಕೊಂಡಂಥ ಮಕ್ಕಳುಗಳಿಗೆ ಮೊದಲನೆ ಬ್ಯಾಚ್, ಎರಡನೆಯ ಬ್ಯಾಚ್, ಮೂರನೆಯ ಬ್ಯಾಚ್ ಹುಡುಗರಿಗೂ ಹಾಸ್ಪೆಲ್‌ನಲ್ಲಿ ವಾಂತಿಯಾಯಿತು. ಅವತ್ತಿನದಿವಸ ೧೧½ ಗಂಟೆಯಲ್ಲಿ ಮೈಲಿ ಮನೆಯಿಂದ ತಂದು ಅಡ್ಮಿಟ್ ಮಾಡಿದಂಥ ಪೇಪೆಂಟ್ ಮೃತ ಹೋದಿತು. ಉಳಿದವರಿಗೆ ಏನಾಯಿತು ಎಂಬ ವಿಚಾರವನ್ನು ಹೇಳಿದ್ದಾರೆ. ಸ್ವಾಮಿ, ಆ ಹುಡುಗಿ ತಮ್ಮ ಪೇರೆಂಟ್ಸ್ ಮನೆಯಲ್ಲಿಯೇ ಆಹಾರವನ್ನು ಉಪಯೋಗಿಸಿರಲಿ, ಎಲ್ಲಿಯೇ ಉಪಯೋಗಿಸಿರಲಿ, ಈ ಬಾಲಕಿ ಒಬ್ಬಳಿಗೇ ವಾಂತಿಯಾಗಿಲ್ಲ. ಬೇರೆಯವರಿಗೂ ಆಗಿನೆ. ಆ ದಿವಸ ಸತ್ತು ಹೋದ ಕಾರಣಕ್ಕಾಗಿ ಈ ರೀತಿ ಉತ್ತರ ಕೊಟ್ಟಿದ್ದಾರೆ. ಜೀವಂತ ಇದ್ದರೆ, ಹುಡುಗರ ಜೊತೆಯಲ್ಲಿಯೇ ಇದ್ದರೆ ಏನು ಉತ್ತರ ಕೊಡುತ್ತಿದ್ದರು ? ಇದು ಬಹಳ ವಿಚಿತ್ರವಾದ ಸಂಗತಿಯಾಗಿದೆ. ಜೊತೆಗೆ ಜನತಾ ಬಜಾರ್‌ನಿಂದ ಸಪ್ಲೈಯಾದಂತ ಆಕ್ಕಿಯೇ ಕಾರಣವೆಂದು ಒಬ್ಬ ಡಾಕ್ಟರ್ ಸರ್ಟಿಫಿಕೇಟ್ ಕೊಡ ಬೇಕಾದರೆ, ಬರೇ ಅನ್ನ ತಿನ್ನುತ್ತಾರೆಯೇ ? ಉದಾಹರಣೆಗೆ ಅನ್ನಕ್ಕೆ ಸೇರಿಸತಕ್ಕಂಥ ಇತರ ಪದಾರ್ಥ ಗಳು ಅಂದರೆ ತಿಳಿಸಾರ್, ಪಲ್ಯಾ, ಸಾಂಬಾರ್, ಮಜ್ಜಿಗೆ, ಇದೆಲ್ಲವನ್ನು ಸೇರಿಸಿ ಅಲ್ಲವೇ ತೆಗೆದು ಕೊಳ್ಳುವುದು. ಡಾಕ್ಟರ್ ಹೇಗೆ ಸ್ಪೆಸಿಫಿಕ್ ಆಗಿ ಇದು ಬರೆ ಅನ್ನವನ್ನು ತಿಂದದ್ದರಿಂದ ಇದಕ್ಕೆ ಕಾರಣ ವಾಗಿದೆ ಎಂದು ಸರ್ಟಿಫಿಕೇಟ್ ಕೊಟ್ಟಿದ್ದಾರೆ. ಅಂದರೆ ಈ ರಿಪೋರ್ಟ್‌ನ್ನು ಮಾನ್ಯ ಮಂತ್ರಿಗಳು ಈ ಮನೆಯಲ್ಲಿ ಇಟ್ಟರೆ ಎಷ್ಟರಮಟ್ಟಿಗೆ ಸತ್ಯಾಂಶವಿದೆ ಎಂದು ತಿಳಿದುಕೊಳ್ಳಬಹುದು. ಜೊತೆಗೆ ಜನತಾ

† Indicates that remarks or speeches have not been revised by the member concerned.

ಬಜಾರ್‌ನಿಂದ ಜನರಲ್ ಹಾಸ್ಪೆಟಲ್‌ಗೆ ಸಪ್ಲೈಯಾದ ಅಕ್ಕಿ ಕೇವಲ ಹಾಸ್ಪೆಟಲ್‌ಗೆ ಮಾತ್ರ ಸಪ್ಲೈಯಾಗಿತ್ತೆ ? ಅಥವಾ ಎಲ್ಲ ಕಡೆಗೂ ಸಪ್ಲೈಯಾಗಿತ್ತೇ ? ಎಲ್ಲ ಕಡೆಗೂ ಸಪ್ಲೈ ಆಗಿದ್ದರೆ ಇತರ ಜನರಿಗೂ ವಾಂತಿ ಯಾಗಬೇಕಾಗಿತ್ತು. ವಾಂತಿ ಶುರುವಾದ ಜನರೆಲ್ಲರೂ ಆಸ್ಪತ್ರೆಗೆ ಅಡ್ಮಿಟ್ ಆಗಬೇಕಾಗಿತ್ತು. ಆದ್ದರಿಂದ ಇದು ಸರಿಯಾದ ವರದಿಯಲ್ಲ ; ದಯವಿಟ್ಟು ಸರಿಯಾದ ವಾತಾವರಣದಲ್ಲಿ ಎನ್‌ಕ್ವಯರಿ ಮಾಡಬೇಕು. ಈ ರೀತಿಯಾದ ಘಟನೆ ಯಾವ ರೀತಿಯಲ್ಲಿ ಸಂಭವಿಸಿತು, ಇದಕ್ಕೆ ಯಾರು ಕಾರಣ ಕರ್ತರು ಎನ್ನುವುದನ್ನು ಪೂರ್ಣವಾಗಿ ತನಿಖೆ ಮಾಡಿ ಅವರನ್ನು ಶಿಕ್ಷೆಗೆ ಗುರಿಪಡಿಸಬೇಕು. ಜೊತೆಗೆ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುವುದೇನೆಂದರೆ, ನನ್ನ ಕ್ಷೇತ್ರದಲ್ಲಿ ೩–೪ ಹಾಸ್ಪೆಟಲುಗಳು ಇರಂತ್ತವೆ ನಿಜವಾಗಿಯೂ ಸರ್ಕಾರದ ಧೋರಣೆ ಧ್ಯೇಯ ಉತ್ತಮವಾದ ಧೋರಣೆಯಾಗಿರುತ್ತದೆ. ಬಡಜನತೆಯ ಮಕ್ಕಳಿಗೆ ಉಚಿತವಾದ ಆಹಾರವನ್ನು ಒದಗಿಸಿ ವಿದ್ಯೆಯನ್ನು ಕೊಡತಕ್ಕಂಥದ್ದಕ್ಕೆ ಲಕ್ಷಾಂತರ, ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿದರೂ ಸಹಾ ಈವತ್ತು ಬಡಮಕ್ಕಳಿಗೆ ಕೊಡುವಂಥ ಆಹಾರ ಪದಾರ್ಥಗಳು, ಮಕ್ಕಳಿಗೆ ಅಡಿಗೆ ಮಾಡಲು ಮಾಡಿರತಕ್ಕಂಥ ವ್ಯವಸ್ಥೆ. ನಿಜವಾಗಿಯೂ ಕೂಡ ಅದನ್ನು ನೋಡಿದರೆ ದನಗಳ ದೊಡ್ಡಿಯ ತರಹ ಇವೆ. ದನಗಳಿಗೆ ಆದರೂ ಉತ್ತಮವಾದ ರೀತಿಯಲ್ಲಿ ನೋಡಿಕೊಳ್ಳುತ್ತಾರೆ. ಚೆನ್ನಾದ ಹುಲ್ಲನ್ನು ಹಾಕುತ್ತಾರೆ. ಒಳ್ಳೆಯ ನೀರನ್ನು ಕುಡಿಸುತ್ತಾರೆ. ದಿವಸ ಚೊಕ್ಕಟವಾಗಿ ಇಡುತ್ತಾರೆ. ಆದರೆ ಹಾಸ್ಪೆಲ್‌ನಲ್ಲಿ ಇರತಕ್ಕಂಥ ಮಕ್ಕಳ ಸ್ಥಿತಿಯನ್ನು ನೋಡಿದರೆ ಬಹಳ ವಿಷಾದವಾಗುತ್ತದೆ. ಬಹಳ ನೋವು ಉಂಟಾಗುತ್ತದೆ. ಇದು ಹೋಗಬೇಕು. ಇದನ್ನು ಸರಿಯಾದ ರೀತಿಯಲ್ಲಿ ತನಿಖೆ ಮಾಡಬೇಕು. ಮೇಲಿನ ಅಧಿಕಾರಿಗಳು ಬಡ್ಜೆಟ್ ಸ್ಯಾಂಕ್ಷನ್ ಒದಗಿಸಿ ಕೊಟ್ಟುಬಿಡುತ್ತಾರೆ. ಹಣವನ್ನು ಒದಗಿಸಿಕೊಟ್ಟುಬಿಟ್ಟರೆ ತಮ್ಮ ಕೆಲಸ ಮುಗಿಯಿತು ಎಂದು ಹೇಳಂತ್ತಾರೆಯೇ ವಿನಃ ಹಾಸ್ಪೆಲ್‌ಗಳಲ್ಲಿರತಕ್ಕಂಥ ಅಧಿಕಾರಿಗಳು ವಾರ್ಡನ್ಸ್,, ಸಂಬಂಧಪಟ್ಟ ಸೇವಕರು ಎಲ್ಲರೂ ಸೇರಿಕೊಂಡು ಮಾಡತಕ್ಕಂಥ ಕೃತ್ಯದಿಂದ ಇಂಥ ಅನಾಹುತಗಳಿಗೆ ಕಾರಣವಾಗುತ್ತಿವೆ ; ಇಲ್ಲಿಗೆ ಒದಗಿಸತಕ್ಕಂಥ ಹಣಕ್ಕೆ ಉತ್ತಮವಾದ ಆಹಾರವನ್ನು ಕೊಡಲಿಕ್ಕೆ ಸಾಧ್ಯತೆ ಇರುತ್ತದೆ. ಈ ಹಣವನ್ನು ಮೊನ್ನೆ ಬಡ್ಜೆಟ್‌ನಲ್ಲಿ ಹೆಚ್ಚಿಸಿದ್ದಾರೆ. ಆದರೆ ಈ ಹಣವನ್ನು ಖರ್ಚು ಮಾಡುತ್ತಿದ್ದಾರೆಯೇ ವಿನಃ ಆಲ್ಲಿರತಕ್ಕಂಥ ಮಕ್ಕಳಿಗೆ ಉತ್ತಮವಾದ ಅಕ್ಕಿ ಉತ್ತಮವಾದ ಆಹಾರ ಪದಾರ್ಥಗಳನ್ನು ನೀಡಲಿಕ್ಕೆ ಮತ್ತು ಹಾಸ್ಪೆಲ್‌ಗಳಲ್ಲಿ ಇರತಕ್ಕಂಥ ವಸತಿ ಸೌಕರ್ಯ ಇವೆಲ್ಲವನ್ನು ಉತ್ತಮಗೊಳಿಸುವತ್ತ ಗಮನ ಹರಿಸುತ್ತಿಲ್ಲ. ಕೇವಲ ೨೫ಜನ ಮಕ್ಕಳಿಗೆ ಸ್ಥಳಾವಕಾಶವಿದ್ದರೂ ೧೦೦ ಜನ ಮಕ್ಕಳನ್ನು ದೊಡ್ಡಿಗೆ ತುಂಬಿದಂತೆ ತುಂಬಿರುತ್ತಾರೆ. ಇದು ಚಿಕ್ಕಮಗಳೂರಿಗೆ ಒಂದಕ್ಕೆ ಸಂಬಂಧಪಟ್ಟ ವಿಚಾರವಲ್ಲ, ಇದನ್ನು ಹೀಗೆ ಮುಂದುವರಿಸಿಕೊಂಡು ಹೋದರೆ, ಕಳ್ಳಭಟ್ಟಿ ಕುಡಿದು ಅನೇಕ ಜನ ಸತ್ತುಹೋದಂತೆ ನಾಳೆಯ ದಿವಸ ಫುಡ್ ಪಾಯ್ಜನ್ ಆಗಿ ಜನರು ಸಾಯಬಹುದು. ಹಾಸ್ಪೆಲ್‌ಗಳಲ್ಲಿ ಮಕ್ಕಳೂ ಸಾಯಬಹುದು. ಆದ ರಿಂದ ಸರ್ಕಾರದ ಧ್ಯೇಯಧೋರಣೆ ಏನು ಇದೆ, ಅದರಂತೆ ಉತ್ತಮವಾದ ಆಹಾರವನ್ನು ಒದಗಿಸ ಬೇಕು. ಈ ದುರಂತಕ್ಕೆ ಕಾರಣಕರ್ತರಾದವರ ಬಗ್ಗೆ ಬಿಗಿಯಾದ ಕ್ರಮ ತೆಗೆದುಕೊಳ್ಳಬೇಕು. ಹಾಸ್ಪೆಟ್ಲಿನ ಕ್ಯಾಪ್ಯಾಸಿಟಿ ಎಷ್ಟು ಇದೆಯೋ ಅಷ್ಟೇ ಮಕ್ಕಳನ್ನು ಸೇರಿಸಿಕೊಳ್ಳುವಂತೆ ವ್ಯವಸ್ಥೆಯನ್ನು ಮಾಡಬೇಕು. ೫೦ ಜನ ಹುಡುಗರಿಗೆ ಕೊಡತಕ್ಕಂಥದನ್ನು ೨೫ ಜನರಿಗೆ ಕೊಡಿ ಸಂತೋಷ. ಇನ್ನು ೨೫ ಜನರು ಬೇರೆ ರೀತಿಯಲ್ಲಿ ವ್ಯವಸ್ಥೆ ಮಾಡಿಕೊಳ್ಳುತ್ತಾರೆ. ಆದ್ದರಿಂದ ಸರಿಯಾದ ರೀತಿಯಲ್ಲಿ ತನಿಖೆ ಮಾಡಬೇಕು. ತಮಗೆ ಒದಗಿಸಿರತಕ್ಕಂಥ ರಿಪೋರ್ಟ್ ಬೇರೆಯಾಗಿದೆ. ಏಕೆಂದರೆ, ನಾನು ಸ್ಥಳೀಯವಾಗಿ ಅಲ್ಲಿನ ಸಬ್‌ಇನ್‌ಸ್ಪೆಕ್ಟರ್‌ಗೂ ಫೋನ್ ಮಾಡಿ ಅಲ್ಲಿ ಆಗಿರತಕ್ಕಂಥ ವಿಚಾರವನ್ನು ತಿಳಿದುಕೊಂಡಿದ್ದೇನೆ. ನಿಮಗೆ ಕೊಟ್ಟಿರತಕ್ಕಂಥ ರಿಪೋರ್ಟ್ ಬೇರೆಯಾಗಿರುತ್ತದೆ. ಆದ್ದರಿಂದ ಸರಿಯಾದಂಥ ವಿಚಾರಣೆ ಯನ್ನು ಮಾಡಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಿ. ವಿ. ಕಕ್ಕಿಲಾಯ (ವಿತಲ).—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಮಂಡಿಸಿರ ತಕ್ಕಂಥ ವರದಿಯನ್ನು ನೋಡಿದರೆ ಕೆಲವು ಪ್ರಶ್ನೆಗಳು ಉದ್ಭವವಾಗುತ್ತದೆ. ಆಪ್ಪಕ್ಕೆ ಮಾತ್ರ ಸೀಮಿತ ವಾಗಿ ಹೇಳುತ್ತೇನೆ. ೧೯ನೇ ತಾರೀಖಿನ ದಿವಸ ಕುಮಾರಿ ರುಕ್ಮಣಿ ಎಂಬ ಹುಡುಗಿ ಅಲ್ಲಿ ಆಹಾರವನ್ನು ಸೇವನೆ ಮಾಡಿ ಮನೆಗೆ ಹೋದ ಮೇಲೆ ಆಕೆಗೆ ವಾಂತಿ ಶುರುವಾಗಿ, ಆಮೇಲೆ ಆಸ್ಪತ್ರೆಗೆ ಸೇರಿಸಿದಾಗ, ಆಸ್ಪತ್ರೆಯಲ್ಲಿ ತೀರಿಕೊಂಡಳು ಎಂದು ಹೇಳಿದ್ದಾರೆ. ಇದಾದಮೇಲೆ ೨೧ನೇ ತಾರೀಖು ಇದೇ ಹಾಸ್ಪೆಟಲ್‌ನಲ್ಲಿ ಇದೇ ರೀತಿ ಇತರ ಮಕ್ಕಳಿಗೂ ವಾಂತಿ ಆಯಿತು. ಅವರನ್ನೂ ಕೂಡ ಆಸ್ಪತ್ರೆಗೆ ಸಾಗಿಸಲಾಯಿತು.

ಆಗ ಅವರು ಯಾರೂ ತೀರಿಕೊಳ್ಳಲಿಲ್ಲ. ಸಕಾಲದಲ್ಲಿ ಅವರಿಗೆ ಔಷಧೋಪಚಾರ ಸಿಕ್ಕಿದ್ದರಿಂದ ಅವರು ಉಳಿದುಕೊಂಡರು. ಅದಾದಮೇಲೆ ಮತ್ತೆ ೭ ಮಕ್ಕಳು ಇನ್ನೊಂದು ಹಾಸ್ಪೆಲ್‌ನಲ್ಲಿ ಆವತ್ತಿನ ದಿವಸವೇ ಈ ಒಂದು ವಾಂತಿ ಸಂದೇಹ ಬಂದು ಅವರುಗಳನ್ನೂ ಕೂಡ ಆಸ್ಪತ್ರೆಗೆ ಸಾಗಿಸಿದ್ದಾಯಿತು. ಇದನ್ನು ನೋಡಿದರೆ ಏನು ಅನಿಸುತ್ತದೆ ಎಂದರೆ, ತಾವು ದಯವಿಟ್ಟು ಒಂದು ವಿಚಾರವನ್ನು ತಿಳಿಸಬೇಕು. ಹಾಸ್ಪೆಲ್‌ಗಳಿಗೆ ಕೊಡುವಂಥ ಆಹಾರಕ್ಕೆ ತಾವು ಕೊಡುವಂಥ ಹಣ ಅವರಿಗೆ ಆರೋಗ್ಯಕರವಾದ ಒಳ್ಳೆಯ ಆಹಾರ ಸಿಕ್ಕುತ್ತದೆಯೇ ಎನ್ನುವುದನ್ನು ಯೋಚನೆ ಮಾಡಬೇಕು. ತಾವು ಕೊಡುವಂಥ ಹಣ ಬಹಳ ಕಡಿಮೆ ಇರುವುದರಿಂದ ಅವರು ಎಲ್ಲಿ ಏನು ಸಿಗುತ್ತದೆಯೋ ಅದನ್ನು ತೆಗೆದುಕೊಂಡು ಹೋಗಿ ಮಕ್ಕಳಿಗೆ ಕೊಡುತ್ತಾರೆ. ೪೦ ರೂಪಾಯಿ ಒಬ್ಬ ಮಗುವಿಗೆ ಕೊಟ್ಟರೆ ಯಾವರೀತಿ ಆರೋಗ್ಯಕರವಾದ ಆಹಾರವನ್ನು ಹೊಟ್ಟೆತುಂಬ ಕೊಡಲಿಕ್ಕೆ ಸಾಧ್ಯವಾಗುತ್ತದೆ ? ಇದನ್ನು ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ನವರು ಪರಿಶೀಲನೆ ಮಾಡಬೇಕು. ದುರಂತ ನಡೆಯಿತು. ಇದಕ್ಕೆ ಕಳವಳಪಡುತ್ತೇವೆ. ಚಿಂತೆಯನ್ನು ವ್ಯಕ್ತಪಡಿಸುತ್ತೇವೆ, ಆದರೆ ಇದನ್ನು ಸರಿಪಡಿಸತಕ್ಕಂಥ ಜವಾಬ್ದಾರಿ ತಮ್ಮ ಮೇಲೆ ಇದೆ. ಇಂಥದು ಪದೆಪದೇ ಆಗಬಾರದು. ಅದು ಆಗದೆ ಇರಬೇಕಾದರೆ ಸಾಕಷ್ಟು ಸ್ಥಳಾವಕಾಶ ಇರಬೇಕು. ಸ್ಯಾನಿಟರಿ ಕಂಡೀಷನ್ ಚೆನ್ನಾಗಿರಬೇಕು. ಕೊಡತಕ್ಕಂಥ ಆಹಾರ ಪದಾರ್ಥಗಳು ಆರೋಗ್ಯಕರವಾದ ಆಹಾರ ಪದಾರ್ಥಗಳಾಗಿರಬೇಕು. ಎಷ್ಟು ಮಕ್ಕಳು ಹಾಸ್ಪೆಲ್‌ಗೆ ಸೇರಿರುತ್ತಾರೋ ಅಷ್ಟು ಮಕ್ಕಳಿಗೆ ಸರಿಯಾಗಿ ಸಾಕಷ್ಟು ಹಣ ಒದಗಿಸಬೇಕು. ಇದರಲ್ಲಿ ತಮ್ಮ ಇಲಾಖೆಯವರು ಸರಿಯಾದ ವ್ಯವಸ್ಥೆಯಲ್ಲಿ ನೋಡಿಕೊಳ್ಳುತ್ತಿದ್ದಾರೆಯೇ ಇಲ್ಲವೆ ಎನ್ನುವುದನ್ನು ಆಗಿಂದಾಗ್ಗೆ ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಎರಡನೆಯದಾಗಿ ತಾವು ಹಣವನ್ನು ಸರಿಯಾದ ರೀತಿಯಲ್ಲಿ ಹಾಸ್ಪೆಲ್‌ಗೆ ಏನಿಯೋಗ ಮಾಡಿದ್ದೀರಾ ಎಂಬುದನ್ನು ನೋಡಬೇಕು. ಈಗ ಜನತಾ ಬಜಾರಿನಿಂದ ಅಕ್ಕಿ ತಂದಿರುವುದರಿಂದ ಆ ಅಕ್ಕಿ ಸರಿಯಾಗಿಲ್ಲ ಎನ್ನುವುದು ತಮ್ಮ ವರದಿಯಿಂದ ಗೊತ್ತಾಗುತ್ತದೆ. ತಾವು ಹಾಸ್ಪೆಲಿನ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿದ್ದೀರಿ. ಆದರೆ ಜನತಾ ಬಜಾರ್‌ನವರು ಅಕ್ಕಿ ಸಪ್ಲೈ ಮಾಡಿರುವುದರಿಂದ ಅಲ್ಲಿರುವಂತಹ ಅಕ್ಕಿಯನ್ನು ಪೋಲೀಸ್‌ನವರು ಏತಕ್ಕೆ ಸೀಜ್ ಮಾಡಿಲ್ಲ ? ಅಕ್ಕಿ ತಿಂದ ಹಾಸ್ಪೆಲ್‌ನವರಿಗೆ ಏತಕ್ಕೆ ಹೀಗೆ ಆಯಿತು ? ಊರಿನ ಜನಗಳಿಗೆ ಏತಕ್ಕೆ ಆ ರೀತಿ ಆಗಲಿಲ್ಲವೆಂದು ಶ್ರೀ ಚಂದ್ರೇಗೌಡರು ಕೇಳಿದ್ದಾರೆ. ಊರಿನವರಿಗೆ ಬೇರೆ ಅಕ್ಕಿಯನ್ನು ಕೊಟ್ಟಿರಬಹುದೆ ? ಹಾಸ್ಪಲ್‌ಗೆ ಕಡಿಮೆ ಬೆಲೆಗೆ ಕೊಡತಕ್ಕಂತಹ ಅಕ್ಕಿಯನ್ನು ಕೊಟ್ಟಿದ್ದಾರೆ ಎಂಬುದು ನಮಗೆ ಗೊತ್ತಿಲ್ಲ. ಜನತಾ ಬಜಾರ್‌ನವರು ಕೊಟ್ಟಂತಹ ಅಕ್ಕಿಯಿಂದ ಹೀಗಾಗಬೇಕಾದರೆ ಜನತಾ ಬಜಾರಿನಲ್ಲಿರತಕ್ಕ ಸ್ಟಾಕನ್ನು ಏತಕ್ಕೆ ಸೀಜ್ ಮಾಡಲಿಲ್ಲ. ವಸ್ತುಸ್ಥಿತಿ ಅಲ್ಲಿರತಕ್ಕ ಜಿಲ್ಲಾಧಿಕಾರಿಗಳು, ಪೋಲೀಸ್‌ನವರು (ಜನತಾ ಬಜಾರ್‌ನವರ ಮೇಲೆ ಏತಕ್ಕೆ ಕ್ರಮ ತೆಗೆದುಕೊಂಡಿಲ್ಲ ? ಫುಡ್ ಕಾಯಿದೆ ಇದೆ, ಆ ಕಾಯಿದೆ ಪ್ರಕಾರ ಮಕ್ಕಳಿಗೆ ಅಕ್ಕಿಯನ್ನು ಪೂರೈಕೆ ಮಾಡತಕ್ಕಂತಹ ವ್ಯಾಪಾರಸ್ಥರ ಮೇಲೆ ಅಥವಾ ಜನತಾ ಬಜಾರಿನವರ ಮೇಲೆ ಕಡ್ಡಾಯವಾಗಿ ಕ್ರಮ ತೆಗೆದುಕೊಳ್ಳಬೇಕು. ಆ ರೀತಿ ಕ್ರಮ ತೆಗೆದುಕೊಂಡ ಮಾಹಿತಿ ಯಾವುದೂ ಇಲ್ಲ. ಕ್ರಮವನ್ನು ಯಾವರೀತಿ ತೆಗೆದುಕೊಳ್ಳುತ್ತೀರಿ ಎಂಬುದನ್ನು ತಿಳಿಸಬೇಕು. ಒಂದು ಮಗುವು ತೀರಿ ಹೋಗಿದೆ. ಈ ಮಗು ಹಿಂದುಳಿದವರ ಹಾಸ್ಪಲ್‌ನಲ್ಲಿ ಈ ರೀತಿ ಆಗಿರುವುದರಿಂದ ಮಗುವಿನ ಕಡೆಯವರಿಗೆ ಪರಿಹಾರವನ್ನು ಒದಗಿಸಿ ಕೊಡಬೇಕು. ಉಳಿದ ಮಕ್ಕಳಿಗೆ ಸರಿಯಾದ ರೀತಿಯಲ್ಲಿ ಉಟೋಪಚಾರ ಆಗುವಂತೆ ವ್ಯವಸ್ಥೆ ಮಾಡುವ ಒಂದು ಭರವಸೆಯನ್ನು ಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಇಂತಹ ಅನಾಹುತ ಇನ್ನು ಮುಂದೆ ಆಗದ ಹಾಗೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

† ಶ್ರೀ ಪಂಪಾಪತಿ (ದಾವಣಗೆರೆ).—ಮಾನ್ಯ ಅಧ್ಯಕ್ಷರೇ. ಮಾನ್ಯ ಸದಸ್ಯರುಗಳು ಹೇಳಿರುವುದನ್ನೆಲ್ಲಾ ಹೇಳಿದ್ದಾರೆ. ಹಿಂದುಳಿದ ವರ್ಗಗಳ ಮಕ್ಕಳಿಗಾಗಿ ಹಾಸ್ಪಲ್‌ಗಳನ್ನು ಸರ್ಕಾರ ಮಾಡಿದೆ. ಆ ಹಾಸ್ಪಲ್‌ಗಳಲ್ಲಿ ಆಗಿರತಕ್ಕಂತಹ ದುರಂತ ಚಿಕ್ಕಮಗಳೂರಿನಲ್ಲಿ ನಡೆದಿದೆ. ನಮ್ಮ ನಾಯಕರು ಎಲ್ಲವನ್ನೂ ಹೇಳಿದ್ದಾರೆ. ನಾನು ಒಂದು ವಿಷಯ ಮಾತ್ರ ಹೇಳಬೇಕಾಗಿದೆ, ಮಾನ್ಯ ಮಂತ್ರಿಗಳು ಇಂತಹ ಹಾಸ್ಪಲ್‌ಗಳನ್ನು ಎಷ್ಟುಸಲ ಹೋಗಿ ನೋಡಿದ್ದಾರೆ? ಅಲ್ಲಿರತಕ್ಕ ಪರಿಸ್ಥಿತಿಯನ್ನು ಅವರೇ ನಾದರೂ ನೋಡಿದ್ದಾರೆಯೆ?. ನೋಡಿದ್ದರೆ ಇಂತಹ ಪರಿಸ್ಥಿತಿ ಉದ್ಭವಿಸುತ್ತಿರಲಿಲ್ಲವೆಂದು ನಾನು ಹೇಳುತ್ತೇನೆ. ಇದಕ್ಕೆಲ್ಲಾ ಅಲ್ಲಿರತಕ್ಕ ಪರಿಸರ ವಾತಾವರಣ ಕಾರಣವಾಗಿರುತ್ತದೆ. ಚಿಕ್ಕ ಜಾಗಗಳಲ್ಲಿ ಅಡಿಗೆ ತಯಾರು ಮಾಡುತ್ತಾರೆ, ಅಲ್ಲಿ ಬೆಳಕು ಕೂಡ ಇರುವುದಿಲ್ಲ. ಮತ್ತೆ ಊಟವನ್ನು ಯಾವ ರೀತಿ

ಯಲ್ಲಿ ತಯ್ಯಾರು ಮಾಡುತ್ತಾರೆ, ಇದನ್ನೆಲ್ಲಾ ಸ್ವಲ್ಪ ಪರಿಶೀಲನೆ ಮಾಡಿ ನೋಡಿದರೆ ಖಂಡಿತವಾಗಿಯೂ ಇದೆಲ್ಲಾ ಸರಿಯಾಗುತ್ತದೆ. ಒಬ್ಬ ವಿದ್ಯಾರ್ಥಿಗೆ ೪೦ ರೂಪಾಯಿ ತಿಂಗಳೊಂದಕ್ಕೆ ಕೊಟ್ಟರೆ ಸಾಕಾಗುತ್ತದೆಯೇ? ಸರ್ಕಾರದ ಆರೋಗ್ಯ ಇಲಾಖೆಯವರೇ ಪೌಷ್ಟಿಕಾಂಶ ಇಷ್ಟಷ್ಟು ಇರಬೇಕೆಂದು ಹೇಳುತ್ತಾರೆ ತಿಂಗಳಿಗೆ ೪೦ ರೂಪಾಯಿಗಳನ್ನು ಕೊಟ್ಟರೆ ಪೌಷ್ಟಿಕ ಆಹಾರವನ್ನು ಒದಗಿಸಿ ಕೊಡುವುದಕ್ಕೆ ಆಗುತ್ತದೆಯೇ? ೪೦ ರೂಪಾಯಿಗಳಲ್ಲಿ ಮಕ್ಕಳಿಗೆ ಪೌಷ್ಟಿಕ ಆಹಾರವನ್ನು ಒದಗಿಸಿ ಕೊಡುವುದಕ್ಕಾಗುವುದಿಲ್ಲ. ಸರ್ಕಾರದವರು ಬೇರೆಯವರೆಲ್ಲರಿಗೂ ಪೌಷ್ಟಿಕಾಂಶದ ಬಗ್ಗೆ ಪ್ರಚಾರ ಮಾಡುತ್ತಾರೆ ಏನಹ ಸರ್ಕಾರವೇ ಮಕ್ಕಳಿಗೆ ಆಹಾರ ಕೊಡುವಾಗ ಅದರಲ್ಲಿ ಪೌಷ್ಟಿಕಾಂಶ ಇರುವುದು ಬೇಡವೇ ಎನ್ನುತಕ್ಕದ್ದಾ ನನ್ನ ಪ್ರಶ್ನೆ. ಈಗ ನೀವು ಕೊಡುತ್ತಿರುವ ೪೦ ರೂಪಾಯಿ ಸಾಕಾಗುವುದಿಲ್ಲ. ಅನೇಕ ಕಡೆ ಇಂತಹ ಕೊಳಕು ಪರಿಸ್ಥಿತಿಯಿಂದ ಮಕ್ಕಳಿಗೆ ಕಾಯಿಲೆ ಬಂದು ಮೃತರಾಗುವ ಸಂಭವ ಇರುತ್ತದೆ. ಆದ್ದರಿಂದ ಇಲಾಖಾ ಅಧಿಕಾರಿಗಳು ತನಿಖೆ ನಡೆಸಬೇಕೇ ಹೊರತು, ಹಾಸ್ಟಲ್ ಮಾಡಿದ್ದೇವೆ ಕೆಲವು ಮಕ್ಕಳಿಗೆ ಅವಕಾಶ ಒದಗಿಸಿ ಕೊಟ್ಟಿದ್ದೇವೆಂದು ತೃಪ್ತಿಹೊಂದಿದರೆ ಸಾಲದು, ಅದು ಕಾರ್ಯಗತವಾಗಬೇಕು, ವ್ಯವಸ್ಥಿತವಾಗಿ ನಡೆಯಬೇಕು. ಸಮಾಜ ಕಲ್ಯಾಣ ಇಲಾಖೆ ಅವರ ಮೇಲೆ ಆಗಿಂದಾಗ್ಗೆ ತನಿಖೆ ನಡೆಸುತ್ತಿರಬೇಕು. ಹೀಗೆ ಮಾಡದಿದ್ದರೆ ಚಿಕ್ಕಮಗಳೂರಿನಲ್ಲಿ ಮಾತ್ರವಲ್ಲ ರಾಜ್ಯದ ಎಲ್ಲಾ ಕಡೆಗಳಲ್ಲಿ ಇಂತಹ ಅನಾಹುತ ಆಗುವ ಸಂಭವವುಂಟು, ಆದ್ದರಿಂದ ಇನ್ನು ಮುಂದಾದರೂ ಮಾನ್ಯ ಮಂತ್ರಿಗಳು ಸಂಬಂಧಪಟ್ಟ ಅಧಿಕಾರಿಗಳು ಮೇಲಿಂದ ಮೇಲೆ ತನಿಖೆ ನಡೆಸುವಂತೆ ಮತ್ತು ಈ ರೀತಿಯಾಗದಂತೆ ನೋಡಿಕೊಳ್ಳುವ ಜವಾಬ್ದಾರಿಯ ಕಡೆಗೆ ಗಮನ ಕೊಡಬೇಕು. ಇಷ್ಟು ವಿಷಯಗಳನ್ನು ತಮ್ಮ ಮೂಲಕ ಮಾನ್ಯ ಮಂತ್ರಿಗಳಿಗೆ ತಿಳಿಸುತ್ತಾ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ಎಫ್. ಭೈರಿ.—ಮಾನ್ಯ ಅಧ್ಯಕ್ಷರೇ, ಇವತ್ತು ಚಿಕ್ಕಮಗಳೂರಿನಲ್ಲಿ ಈ ರೀತಿ ಆಗಿದೆ. ಹಾಸ್ಟಲ್‌ಗಳ ಮಕ್ಕಳಿಗೆ ಕೊಡತಕ್ಕ ೪೦ ರೂಪಾಯಿನ ಹಣದಲ್ಲಿ ಹಾಸ್ಟಲ್ ನಡೆಸಕತ್ಕವರು ಹಾಗೂ ಸಂಬಂಧಪಟ್ಟ ಇಲಾಖೆಯವರು ೧೦ ರೂಪಾಯಿ ತೆಗೆದುಕೊಳ್ಳುತ್ತಾರೆ. ಕೊಡತಕ್ಕ ಹಣದಲ್ಲಿ ನಾಲ್ಕಾಣೆ ಭಾಗ ಇವರುಗಳೇ ತೆಗೆದುಕೊಳ್ಳುತ್ತಾರೆ. ಅದನ್ನು ಸ್ವತಹ ನಾನು ನೋಡಿದ್ದೇನೆ. ಮಂತ್ರಿಗಳು ಈ ವಿಷಯವನ್ನು ಗಮನಕ್ಕೆ ತೆಗೆದುಕೊಳ್ಳುವುದು ಉಚಿತವಾಗಿದೆ ಹಾಸ್ಟಲ್‌ಗಳಲ್ಲಿ ಕೊಳಕು ಇರುವುದರ ಜೊತೆಗೆ ಜನತಾ ಬಜಾರ್‌ನವರು ಕೆಟ್ಟ ಅಕ್ಕಿಯನ್ನು ಕೊಟ್ಟಿರುವುದರಿಂದ ಈ ರೀತಿಯಾಗುತ್ತಿದೆ. ನಾನು ಗುಲ್ಬರ್ಗ ಜಿಲ್ಲೆಯಲ್ಲಿ ಸಹ ಇಂಥದ್ದನ್ನು ನೋಡುತ್ತಿದ್ದೇನೆ, ಇಂತಹವರಿಗೆ ಶಿಕ್ಷೆ ಕೊಡಬೇಕೆಂದು ನಾನು ಕಂಪ್ಲೈಂಟ್ ಮಾಡಿದ್ದೇನೆ. ಇನ್ನು ಮುಂದೆ ಈ ರೀತಿಯಾಗುವಂತೆ ಮಾನ್ಯ ಮಂತ್ರಿಗಳು ನೋಡಿಕ್ಕೊಬೇಕೆಂದು ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀಮತಿ ಸುಶೀಲಚೆಲುವರಾಜ್.—ಮಾನ್ಯ ಅಧ್ಯಕ್ಷರೇ, ಇಲ್ಲಿ ಕೊಟ್ಟಿರುವ ವರದಿಯ ಪ್ರಕಾರ ೧೯ನೇ ತಾರೀಖು ಊಟವಾದ ನಂತರ ವಾಂತಿ ಮಾಡಿದ್ದಾರೆಂದು ಹೇಳಿದ್ದಾರೆ. ೧೯ನೇ ತಾರೀಖು ಊಟ ಮಾಡುವಾಗ ಈ ಹುಡುಗಿ ಒಬ್ಬಳೇ ಊಟ ಮಾಡಿದ್ದಾಳೇ ? ಉಳಿದ ಹೆಣ್ಣು ಮಕ್ಕಳು ಊಟ ಮಾಡಿರಲಿಲ್ಲವೇ ? ಊಟಮಾಡಿಕೊಂಡು ಹೋದಮೇಲೆ ಮನೆಯಲ್ಲಿ ವಾಂತಿಯಾಗಿದೆ ಎಂದು ಹೇಳಿದ್ದಾರೆ. ಉಳಿದ ೨೦-೨೫ ಜನ ಹುಡುಗಿಯರಿಗೆ ೨೦ನೇ ತಾರೀಖು ಒಂದು ಸಾರಿ ವಾಂತಿಯಾಯಿತೆಂದು ಹೇಳಿದ್ದಾರೆ. ಫುಡ್ ಪಾಯಿಸನ್ ಆಗಿದ್ದರೆ ೧೯ನೇ ತಾರೀಖು ಎಲ್ಲಾ ಹೆಣ್ಣು ಮಕ್ಕಳಿಗೂ ಆಗಬಹುದಾಗಿತ್ತು. ಸಭೆಯ ಮುಂದೆ ಕೊಟ್ಟಿರುವ ವಿಷಯ ಸತ್ಯಕ್ಕೆ ದೂರವಾದುದು. ಫುಡ್ ಪಾಯಿಸನ್ ಆಕ್ಕಿಯಲ್ಲಿದರೆ ಸಾರಿನಲ್ಲಿ ಪಾಯಿಸನ್ ಇರಲಿಲ್ಲವೇ ? ಫುಡ್‌ನಿಂದಲೇ ಕಾರಣವೆಂದು ಪತ್ರಿಕೆಗಳಲ್ಲಿ ವರದಿಯಾಗಿದೆ. ವಾಂತಿ ಮಾಡಿಕೊಂಡ ಮೇಲೆ ೧೦ಮೈಲಿ ದೂರದ ಆಂತರದಲ್ಲಿರುವ ಆಸ್ಪತ್ರೆಗೆ ಸೇರಿಸಿದ್ದಾರೆ, ೧೯ನೇ ತಾರೀಖು ಹಾಗೆ ಆದಮೇಲೆ ೨೦ನೇ ತಾರೀಖು ಔಷಧೋಪಚಾರ ಏನೂ ಮಾಡಿಲ್ಲ. ಮನೆಯವರು ಕೂಡ ಉದಾಶೀನ ಮಾಡಿದ್ದಾರೆ. ಇದರಲ್ಲಿ ಡಾಕ್ಟ್ ಬರುತ್ತದೆ. ಈ ಸ್ಟೇಟ್‌ಮೆಂಟ್‌ನಲ್ಲಿರತಕ್ಕುದು ನೋಡಿದರೆ ಯಾವುದೂ ಸತ್ಯವಾಗಿ ಕಾಣುತ್ತಿಲ್ಲ. ಜನತಾ ಬಜಾರಿನಿಂದ ತಂದ ಅಕ್ಕಿಯಿಂದ ಈ ರೀತಿಯಾಗಿದೆ ಎಂದು ಹೇಳುವುದಕ್ಕೆ ಏನೂ ಆಧಾರವಿದೆ ? ಅವರಿಗೆ ಅಕ್ಕಿಯನ್ನು ಮಾರುವ ಅವಕಾಶವಿದೆ. ಆ ಅಕ್ಕಿಯನ್ನು ಯಾರಾದರೂ ಕೊಂಡುಕೊಳ್ಳಬಹುದು. ಇಂತಹ ಅಕ್ಕಿ ತಂದು ಸತ್ತು ಹೋಗಿದ್ದಾರೆ ಎಂದು ಸಂಬುವುದಕ್ಕೆ ಆಗುವುದಿಲ್ಲ. ಮಕ್ಕಳು ಸತ್ತು ಹೋದರೆ ಹಾಸ್ಟಲ್‌ನವರೇ ಹೊಣೆಗಾರಿಕೆ ಇದಕ್ಕೆ ಸಂಬಂಧಪಟ್ಟ ಸೂಪರಿಂಟಿಂಡ್‌ರವರನ್ನು ಸಸ್ಪೆಂಡ್ ಮಾಡಿದ್ದಾರೆ, ಯಾವ ರೀತಿ ಸಸ್ಪೆಂಡ್ ಮಾಡಿದ್ದೀರಿ? ಇದಕ್ಕೆ ಎಷ್ಟರಮಟ್ಟಿನ ಕಾರಣ ಬರುತ್ತದೆ.

ಇದನ್ನು ಸರಿಯಾಗಿ ಎನ್‌ಕ್ವೈರಿ ಮಾಡಿ ಸಭೆಯ ಮುಂದೆ ಇಡಬೇಕು. ಅಕ್ಕಿಯನ್ನು ಸೀಜ್ ಮಾಡಿ ಸಭೆಯ ಮುಂದೆ ತೋರಿಸಬೇಕು. ಪಾಯಿಸನ್ ಇದ್ದರೆ ಯಾವ ರೀತಿ ಇರುತ್ತದೆಂದು ಗೊತ್ತಾಗುತ್ತದೆ. ನನಗೆ ತಿಳಿದಂತೆ ಅಕ್ಕಿಯಲ್ಲಿ ವಿಷವಿರುವುದಿಲ್ಲ. ಆದುದರಿಂದ ವಿಷಯವನ್ನು ತನಿಖೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀಮತಿ ಮೋಟಮ್ಮ (ಮೂಡಿಗೆರೆ) —ಮಾನ್ಯ ಅಧ್ಯಕ್ಷರೇ, ನಾನು ಈ ವಿದ್ಯಾರ್ಥಿ ನಿಲಯದಲ್ಲಿ ಹಳೆಯಂ ವಿದ್ಯಾರ್ಥಿಯಾಗಿದ್ದೆ. ಈ ಕಾರಣದಿಂದ ಈ ವಿಷಯವನ್ನು ನಾನು ಕೇಳಿದ ಕೂಡಲೆ ನನಗೆ ಬಹಳ ವಿಷಾದವಾಯಿತು. ನಾನು ಅಲ್ಲಿ ವ್ಯಾಸಂಗ ಮಾಡುತ್ತಿರುವಾಗ ಹಾಸ್ಟಲ್‌ನ ಪರಿಸ್ಥಿತಿ ಈ ರೀತಿ ಇರಲಿಲ್ಲ. ಆಗ ವಿದ್ಯಾರ್ಥಿಗಳ ಸಂಖ್ಯೆ ಸಹ ಕಡಿಮೆ ಇತ್ತು. ಇದರ ಜೊತೆಗೆ ಆಗಿನ ಅಧಿಕಾರ ವರ್ಗದವರು ಮತ್ತು ಆಡಳಿತ ವರ್ಗದವರು ಹಾಸ್ಟಲ್‌ನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದರು. ಆರೋಗ್ಯದ ದೃಷ್ಟಿಯಿಂದ ನಮಗೆ ಕೊಡುತ್ತಿದ್ದ ಆಹಾರದ ಬಗ್ಗೆ ಸಹ ಅವರು ಹೆಚ್ಚಿನ ಗಮನ ಕೊಡುತ್ತಿದ್ದರು. ಹೀಗೆ ಅಲ್ಲಿದ್ದವರ ಏಳಿಗೆ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸುತ್ತಿದ್ದರು. ಆದರೆ ಈಗ ಅಲ್ಲಿರುವಂತಹ ಸಣ್ಣ ಹಾಸ್ಟಲ್‌ನಲ್ಲಿಯೇ ನೂರಾರು ಮಕ್ಕಳನ್ನು ತುಂಬಿದ್ದಾರೆ ಇದರಿಂದ ಅಲ್ಲಿ ಕೆಲಸ ಮಾಡುವಂತಹ ಅಧಿಕಾರಿಗಳಿಗೆ ಆಸಕ್ತಿ ಕಡಿಮೆಯಾಗಿದೆ. ಇದರ ಜೊತೆಗೆ ಅಲ್ಲಿನ ಅಧಿಕಾರಿಗಳು ಮಕ್ಕಳ ಆಹಾರದ ಬಗ್ಗೆ ಹೆಚ್ಚಿನ ಗಮನಕೊಡುವುದಕ್ಕೆ ಬದಲು ತಮ್ಮ ಒಂದು ಸ್ವಂತ ಅಭಿವೃದ್ಧಿ ಬಗ್ಗೆ ಹೆಚ್ಚು ಗಮನ ಕೊಡುತ್ತಿದ್ದಾರೆಂದು ನನ್ನ ಗಮನಕ್ಕೆ ಬಂದಿದೆ. ಮಾನ್ಯ ಮಂತ್ರಿಗಳು ಇಲ್ಲಿ ನಮಗೆ ಕೊಟ್ಟಿರುವ ಹೇಳಿಕೆಯಲ್ಲಿ ಜನತಾ ಬಜಾರ್‌ನಿಂದ ಕೆಟ್ಟ ಅಕ್ಕಿಯನ್ನು ತಂದು ಉಪಯೋಗಿಸಿದ ಕಾರಣದಿಂದ ಈ ರೀತಿ ಆಗಿದೆ ಎಂದು ಹೇಳಿದ್ದಾರೆ. ಇದು ನಿಜವಾಗಿದ್ದರೆ ಆದೇ ಜನತಾ ಬಜಾರ್‌ನಿಂದ ಇದೇ ಅಕ್ಕಿಯನ್ನು ಬೇರೆಯವರು ಕೊಂಡುಕೊಂಡು ಉಪಯೋಗ ಮಾಡಿದವರಿಗೂ ಸಹ ಇದೇ ಪರಿಸ್ಥಿತಿ ಉಂಟಾಗಬೇಕಾಗಿತ್ತು. ಆದರೆ ಏತಕ್ಕೆ ಆಗಲಿಲ್ಲ ? ಇದನ್ನು ನೋಡಿದರೆ ಆ ಹಾಸ್ಟಲ್‌ನ ಅಧಿಕಾರ ವರ್ಗದವರು ಜನತಾ ಬಜಾರ್‌ನ ಅಧಿಕಾರ ವರ್ಗದವರೊಡನೆ ಏನೋ ಒಂದು ವ್ಯವಹಾರ ಇಟ್ಟುಕೊಂಡು ಇಂತಹ ಕೆಳಮಟ್ಟದ ಅಕ್ಕಿಯನ್ನು ಕೊಂಡುಕೊಳ್ಳುವುದರ ಮೂಲಕ ಹಣ ಉಳಿಸಿಕೊಳ್ಳಲು ಪ್ರಯತ್ನ ಮಾಡಿದ್ದಾರೆಂದು ನನಗನ್ನಿಸುತ್ತದೆ. ಇದರ ಜೊತೆಗೆ ಆ ಹಾಸ್ಟಲ್‌ನಲ್ಲಿ ಸ್ವಚ್ಛತೆ ಎಂಬುದು ಕಡಿಮೆಯಾಗಿದೆ. ವರ್ಷಕ್ಕೊಮ್ಮೆ ಅಲ್ಲಿರುವ ಪಾತ್ರೆಗಳನ್ನು ಕಲಾಯಿ ಮಾಡಿಸಲು ೫ ರೂ.ಗಳನ್ನು ಸರ್ಕಾರದವರು ಕೊಡುತ್ತಿದ್ದರು. ಈಗ ಅದನ್ನು ಜಾಸ್ತಿ ಮಾಡಿದ್ದರೂ ಸಹ ಅಲ್ಲಿ ಪಾತ್ರೆಗಳನ್ನು ಕಲಾಯಿ ಮಾಡಿಸುತ್ತಿಲ್ಲ. ಆದ ಕಾರಣ ಇದರಿಂದಲೂ ವಿಷ ಬೆರೆತಿರುವುದಕ್ಕೆ ಸಾಧ್ಯತೆ ಇದೆ. ಇಲ್ಲಿ ಒಂದು ಹುಡುಗಿಗೆ ೧೯ನೇ ತಾರೀಖು ವಾಂತಿ ಪ್ರಾರಂಭವಾಯಿತು ಎಂದು ಹೇಳಿದ್ದಾರೆ. ಆದರೆ ಬೇರೆ ಯಾರಿಗೂ ಆಗಲಿಲ್ಲ ಮತ್ತು ೨೦ನೇ ತಾರೀಖು ಸಹ ಯಾರಿಗೂ ವಾಂತಿ ಆಗಲಿಲ್ಲ. ಆದರೆ ೨೧ನೇ ತಾರೀಖು ಸುಮಾರು ೧೨ ಹುಡುಗಿಯರಿಗೆ ವಾಂತಿ ಪ್ರಾರಂಭವಾದ ಕಾರಣ ಅವರಗಳನ್ನು ಕೂಡಲೇ ಆಸ್ಪತ್ರೆಗೆ ಸೇರಿಸಲಾಯಿತೆಂದು ಹೇಳಿದ್ದಾರೆ. ಅಂದರೆ ಇದರ ಹಿನ್ನೆಲೆಯಾದರೂ ನನಗೆ ಅರ್ಥವಾಗುತ್ತಿಲ್ಲ. ೧೯ನೇ ತಾರೀಖು ವಾಂತಿಯಾದ ಹುಡುಗಿಯನ್ನು ಕೂಡಲೇ ಆಸ್ಪತ್ರೆಗೆ ಸೇರಿಸಿದ್ದರೆ ಮತ್ತು ಆಸ್ಪತ್ರೆಯಲ್ಲಿ ಡಾಕ್ಟರ್‌ಗಳು ಶ್ರಮವಹಿಸಿ ಚಿಕಿತ್ಸೆ ಮಾಡಿದ್ದರೆ ಆ ಹುಡುಗಿ ಸಾಯುವುದಕ್ಕೆ ಅವಕಾಶವೇ ಇರಲಿಲ್ಲವೆಂದು ನನಗನ್ನಿಸುತ್ತದೆ. ಹಾಸ್ಟಲ್ ರೂಲ್ಸ್ ಪ್ರಕಾರ ವಾರವಾರವೂ ತಪ್ಪದೆ ಸರ್ಕಾರೀ ಆಸ್ಪತ್ರೆಯ ಡಾಕ್ಟರ್ ಹಾಸ್ಟಲ್‌ಗೆ ಭೇಟಿ ಕೊಟ್ಟು ಅಲ್ಲಿರುವ ಹುಡುಗರನ್ನು ಪರೀಕ್ಷೆ ಮಾಡಬೇಕೆಂದು ನಿಯಮವಿದ್ದರೂ ಆದರಂತೆ ಮಾಡುತ್ತಿಲ್ಲ. ಈ ನಿಯಮದಂತೆ ನಡೆದು ಕೊಂಡಿದ್ದರೆ ಇಂತಹ ಒಂದು ಪರಿಸ್ಥಿತಿ ಬರುತ್ತಿರಲಿಲ್ಲ. ಇದರ ಜೊತೆಗೆ ಡಿಸ್ಟ್ರಿಕ್ಟ್ ಸೋಸಿಯಲ್ ವೆಲ್‌ಫೇರ್ ಆಫೀಸರ್ ಮತ್ತು ಸೋಸಿಯಲ್ ವೆಲ್‌ಫೇರ್ ಇನ್ಸ್‌ಪೆಕ್ಟರ್ ಅವರುಗಳು ಸಹ ಹಾಸ್ಟಲ್‌ಗಳನ್ನು ಸರಿಯಾಗಿ ಇನ್ಸ್‌ಪೆಕ್ಷನ್ ಮಾಡುತ್ತಿಲ್ಲ. ಈ ಅಧಿಕಾರಿಗಳು ಆಗಾಗ್ಗೆ ಭೇಟಿ ಕೊಟ್ಟು ಅಲ್ಲಿ ವಸತಿ ಮತ್ತು ಊಟದ ವ್ಯವಸ್ಥೆ ಚೆನ್ನಾಗಿದೆಯೇ ಎಂಬುದನ್ನು ನೋಡಬೇಕಂ. ಈ ಮೊದಲು ಕಾಲಕ್ಕೆ ಸರಿಯಾಗಿ ಭೇಟಿ ಕೊಟ್ಟು ನೋಡುತ್ತಿದ್ದ ಕಾರಣ ಅಲ್ಲಿ ಕೆಲಸ ಮಾಡುತ್ತಿದ್ದ ವಾರ್ಡನ್‌ಗೆ ಮತ್ತು ಇತರೇ ನೌಕರರಿಗೆ ಒಂದು ರೀತಿಯ ಭಯ ಮತ್ತು ಭಕ್ತಿ ಅಧಿಕಾರಿಗಳ ಬಗ್ಗೆ ಇರುತ್ತಿತ್ತು. ಆದರೆ ಈಗ ಈ ಪದ್ಧತಿಯೇ ಇಲ್ಲ. ಮಾನ್ಯ ಮಂತ್ರಿಗಳು ಈ ರೀತಿ ಜೇಜವಾಬ್ದಾರಿಯಿಂದ ಹಾಸ್ಟಲ್‌ಗಳನ್ನು ನೆಡೆಸುವುದಕ್ಕೆ ಹೋದರೆ ನಿಜವಾಗಿಯೂ ನಮ್ಮ ಮಕ್ಕಳು ಉದ್ಧಾರವಾಗುವುದಿಲ್ಲ. ಇಂತಹ ಪ್ರಕರಣಗಳು ಇನ್ನೂ ಹೆಚ್ಚಾಗಬಹುದೆಂಬ ಭಯ ನನಗಾಗುತ್ತಿದೆ. ಆದ್ದರಿಂದ ಇನ್ನು ಮುಂದಾದರೂ ಸಂಬಂಧಪಟ್ಟ ಅಧಿಕಾರಿಗಳು ಮಕ್ಕಳ ಆರೋಗ್ಯದ ದೃಷ್ಟಿಯಿಂದ, ಸ್ವಚ್ಛತೆ ದೃಷ್ಟಿಯಿಂದ ಹಾಗೂ ಅವರ ಅಭಿವೃದ್ಧಿ

ದೃಷ್ಟಿಯಿಂದ ಹೆಚ್ಚಿನ ಆಸಕ್ತಿವಹಿಸಿ ಕೆಲಸ ಮಾಡಬೇಕೆಂದು ಮತ್ತು ಪದೇ ಪದೇ ಹಾಸ್ಪಲ್‌ಗಳಿಗೆ ಭೇಟಿ ಕೊಡಬೇಕೆಂದು ಮಾನ್ಯ ಮಂತ್ರಿಗಳು ಆದೇಶ ನೀಡಬೇಕು. ಈಗ ನಡೆದಿರುವ ಪ್ರಕರಣದ ಬಗ್ಗೆ ತನಿಖೆ ಮಾಡಿಸಿ ಇದಕ್ಕೆ ಕಾರಣರಾದವರ ಮೇಲೆ ಸೂಕ್ತ ಕ್ರಮ ಕೈಕೊಳ್ಳಬೇಕೆಂದ ಮಾನ್ಯ ಅಧ್ಯಕ್ಷರ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಪಿ. ವೆಂಕಟರಮಣ —ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದಂಥ ಶ್ರೀ ಚಂದ್ರೇಗೌಡರು ರುಕ್ಮಿಣಿಯಮ್ಮ ಎಂಬ ಹೆಸರಿನ ಹುಡುಗಿ ಮೈಲಿಮನೆ ಗ್ರಾಮದಲ್ಲಿರುವ ತನ್ನ ಮನೆಗೆ ಹೋಗಿ ಊಟ ಮಾಡಿದ ನಂತರ ವಾಂತಿ ಪ್ರಾರಂಭವಾದ ಮೇಲೆ ಆಸ್ಪತ್ರೆಗೆ ಸೇರಿಸಬೇಕೆಂದು ಹೇಳಿದರು. ಆದರೆ ಈ ಹುಡುಗಿ ಹಾಸ್ಪಲ್‌ನಲ್ಲಿಯೇ ಊಟ ಮಾಡಿ ಹೋಗಿದ್ದು. ಮನೆಗೆ ಹೋದಮೇಲೆ ವಾಂತಿ ಮಾಡಿದಾಗ ಆಕೆಯ ತಂದೆ ತಾಯಿಗಳು ಆ ಹುಡುಗಿಯನ್ನು ೨೦ನೇ ತಾರೀಖು ರಾತ್ರಿ ಆಸ್ಪತ್ರೆಗೆ ಸೇರಿಸಿದರು. ಅನಂತರ ೨೧ನೇ ತಾರೀಖು ಬೆಳಿಗ್ಗೆ ೧೧ ೫೦ ನಿಮಿಷಗಳಲ್ಲಿ ಹುಡುಗಿ ಸತ್ತಿತ್ತು ಎಂದು ಆಕೆಯ ತಂದೆ ತಾಯಿಗಳೇ ಹಾಸ್ಪಲ್ ಬಂದು ಅಲ್ಲಿನ ಅಧಿಕಾರಿಗಳಿಗೆ ತಿಳಿಸಿದ್ದಾರೆ. ಮತ್ತೆ ಹಾಸ್ಪಲ್‌ನಲ್ಲಿ ಕೆಲವು ಸೌಲಭ್ಯಗಳಿಲ್ಲವೆಂದು ಸಹ ಮಾನ್ಯ ಸದಸ್ಯರು ಹೇಳಿದ್ದಾರೆ. ಈಗ ಅಲ್ಲಿನ ಹೆಣ್ಣು ಮಕ್ಕಳ ಹಾಸ್ಪಲ್‌ನಲ್ಲಿ ೧೪೫ ಹುಡುಗಿಯರು ಮತ್ತು ಗಂಡ ಮಕ್ಕಳ ಹಾಸ್ಪಲ್‌ನಲ್ಲಿ ೨೧೫ ಹುಡುಗರು ಇರುವ ಕಾರಣ ಅಲ್ಲಿ ಈಗಿರುವ ಸ್ಥಳ ಸಾಲುವುದಿಲ್ಲವೆಂಬುದನ್ನು ನಾನು ಒಪ್ಪುತ್ತೇನೆ. ಇದಕ್ಕಾಗಿಯೇ ಒಂದು ಹೊಸ ಕಟ್ಟಡವನ್ನು ಕಟ್ಟಿಸಬೇಕೆಂದು ಅಂದಾಜು ಮಾಡಿಸಲಾಗಿದೆ. ಅದರ ಪ್ರಕಾರ ಜಾಗ್ರತೆ ಕಟ್ಟಿಸಲು ನಾನು ವ್ಯವಸ್ಥೆ ಮಾಡುತ್ತೇನೆ. ಮಾನ್ಯ ಕಕ್ಕಿಲಾಯ ಅವರು ಒಬ್ಬರಿಗೆ ತಿಂಗಳಿಗೆ ಕೊಡುವ ಖರ್ಚು ರೂ. ಗಳು ಸಾಲುವುದಿಲ್ಲವೆಂದು ಹೇಳಿದರು. ಇದನ್ನು ಈಗಾಗಲೇ ೬೫ ರೂ. ಗಳಿಗೆ ಹೆಚ್ಚಿಸಲಾಗಿದೆ. ಇತ್ತೀಚೆಗೆ ಇದನ್ನು ೭೫ ರೂ. ಗಳಿಗೆ ಏರಿಸಿದ್ದೇವೆ. ಹಿಂದುಳಿದ ವರ್ಗದವರು ಇರುವಂತಹ ವಿದ್ಯಾರ್ಥಿನಿಲಯಗಳಲ್ಲಿ ಮತ್ತು ಸಮಾಜ ಕಲ್ಯಾಣ ಇಲಾಖೆ ವತಿಯಿಂದ ನಡೆಸುತ್ತಿರುವ ವಿದ್ಯಾರ್ಥಿನಿಲಯಗಳಲ್ಲಿ ವಾಸ ಮಾಡುತ್ತಿರುವವರಿಗೆ ಒಂದು ತಿಂಗಳಿಗೆ ಒಬ್ಬರಿಗೆ ೭೫ ರೂ.ಗಳ ಪ್ರಕಾರ ಕೊಡುತ್ತಿದ್ದೇವೆ. ಇದು ಕಳೆದ ಏಪ್ರಿಲ್ ಒಂದರಿಂದ ಜಾರಿಗೆ ಬಂದಿದೆ. ಇದರ ಜೊತೆಗೆ ಅನಾಥಾಲಯಗಳಲ್ಲಿರುವ ಮಕ್ಕಳಿಗೂ ಸಹ ೪೦ ರೂ. ಗಳಿಂದ ೫೫ ರೂ ಗಳಿಗೆ ಹೆಚ್ಚು ಮಾಡಿದ್ದೇವೆ. ಈ ಮಕ್ಕಳು ವಾಸ ಮಾಡುವ ಸ್ಥಳ ಚೆನ್ನಾಗಿರಬೇಕು. ಅಲ್ಲಿ ಸಾಕಷ್ಟು ಸೌಲಭ್ಯಗಳಿರಬೇಕು, ಸ್ನಾನ ಮಾಡುವ ಕೊಠಡಿಗಳು ಹಾಗೂ ಕಕ್ಕಸ್ ವ್ಯವಸ್ಥೆ ಚೆನ್ನಾಗಿರಬೇಕೆಂದು ಮಾನ್ಯ ಸದಸ್ಯರು ಸಲಹೆ ಮಾಡಿದ್ದಾರೆ. ಇದನ್ನೆಲ್ಲಾ ಒಂದೇ ಸಲ ಮಾಡಲು ಹಣಕಾಸಿನ ತೊಂದರೆ ಇರುವುದರಿಂದ ಹಂತ ಹಂತವಾಗಿ ಇದನ್ನೆಲ್ಲಾ ಮಾಡಬೇಕಾಗಿದೆ. ಈ ಎಲ್ಲ ಅನುಕೂಲಗಳಿರುವ ಮನೆಗಳು ಬಾಡಿಗೆಗೆ ಸಿಗುವುದಿಲ್ಲ. ಈ ಹುಡುಗರಿಗೆ ಎಲ್ಲ ಅನುಕೂಲಗಳನ್ನು ಮಾಡಿಕೊಡಬೇಕೆಂದು ತಾವುಗಳು ಏನು ಹೇಳಿದಿರಿ, ಅದಕ್ಕೆ ನನ್ನ ದ್ವನಿಯನ್ನೂ ಸಹ ಕೂಡಿಸುತ್ತೇನೆ. ನಿಮ್ಮ ಸಲಹೆಗಳನ್ನು ನಾನು ಒಪ್ಪುತ್ತೇನೆ. ಇದು ಬಹಳ ಅಗತ್ಯವಿದೆ. ನಾವು ಕೊಟ್ಟ ಹಣ ಸರಿಯಾಗಿ ಉಪಯೋಗವಾಗಿದೆಯೇ ಅಥವಾ ಇಲ್ಲವೇ ಎಂಬುದನ್ನು ಸಹ ತನಿಖೆ ಮಾಡಬೇಕೆಂದು ತಾವು ಹೇಳಿದ್ದೀರಿ ಇದೇ ಕಾರಣದಿಂದ ನಾವು ಹೋದ ಸಲ ತಾಲ್ಲೂಕ್ ಮಟ್ಟದಲ್ಲಿರುವ ಹಾಸ್ಪಲ್‌ಗಳಿಗೆ ಸಂಬಂಧಪಟ್ಟಂತೆ ಸಮಿತಿಗಳನ್ನು ರಚನೆ ಮಾಡಿದ್ದೇವೆ. ಈ ಸಮಿತಿಗೆ ತಾಲ್ಲೂಕ್ ಅಭಿವೃದ್ಧಿ ಮಂಡಳಿ ಅಧ್ಯಕ್ಷರೇ ಅಧ್ಯಕ್ಷರಾಗಿರುತ್ತಾರೆ ಮತ್ತು ಬಿ. ಡಿ. ಒ. ಅವರು ಸೆಕ್ರೆಟರಿ ಆಗಿರುತ್ತಾರೆ. ಜೊತೆಗೆ ಶಾಸಕರೂ ಸಹ ಇದರ ಸದಸ್ಯರಾಗಿರುತ್ತಾರೆ.

ಶ್ರೀ ಡಿ.ಬಿ. ಚಂದ್ರೇಗೌಡ.—ಈ ಸಮಿತಿಯವರು ಹಾಸ್ಪಲ್‌ಗಳಿಗೆ ಭೇಟಿ ಕೊಡುವಾಗ ನಮ್ಮನ್ನು ಕರೆಯುವುದಿಲ್ಲ ಮತ್ತು ನಮ್ಮ ಸಲಹೆಗಳನ್ನೂ ಸಹ ಕೇಳುವುದಿಲ್ಲ.

ಶ್ರೀ ಪಿ. ವೆಂಕಟರಮಣ.—ಹಾಗಿದ್ದರೆ ನಾನು ಕೂಡಲೇ ಎಲ್ಲರಿಗೂ ಒಂದು ಸುತ್ತೋಲೆಯನ್ನು ಕಳುಹಿಸುತ್ತೇನೆ. ಕನಿಷ್ಠಪಕ್ಷ ೨-೩ ತಿಂಗಳಿಗೊಮ್ಮೆಯಾದರೂ ಮೀಟಿಂಗ್ ಕರೆದು ಈ ಹಾಸ್ಪಲ್‌ಗಳ ಬಗ್ಗೆ ಚರ್ಚೆ ಮಾಡಬೇಕು ಮತ್ತು ಮಾನ್ಯ ಸದಸ್ಯರನ್ನೂ ಕರೆದುಕೊಂಡು ಅಲ್ಲಿಗೆ ಭೇಟಿ ಕೊಟ್ಟು ಅಲ್ಲಿಯಾವ ರೀತಿ ನಡೆಯುತ್ತಿದೆ ಮತ್ತು ಎಷ್ಟರ ಮಟ್ಟಿನ ಸೌಲಭ್ಯಗಳಿವೆ ಎಂಬುದನ್ನು ತನಿಖೆ ಮಾಡಬೇಕೆಂದು ಹೇಳಿದ್ದೇವೆ. ಮತ್ತು ಇದರ ಬಗ್ಗೆ ಸರ್ಕಾರಕ್ಕೆ ವರದಿ ಕೊಡಬೇಕೆಂದು ಹೇಳಿದ್ದೇವೆ. ಜಿಲ್ಲಾ ಮಟ್ಟದಲ್ಲಿಯೂ ಇಂತಹ ಸಮಿತಿಗಳನ್ನು ರಚನೆ ಮಾಡಿದ್ದೇವೆ. ಇದಕ್ಕೆ ಡಿ.ಸಿ. ಅವರೇ ಅಧ್ಯಕ್ಷರಾಗಿರುತ್ತಾರೆ. ಸಮಾಜ ಕಲ್ಯಾಣ ಇಲಾಖೆ ವತಿಯಿಂದ ನಡೆಯುವ ಮತ್ತು ಹಿಂದುಳಿದ ವರ್ಗದ ವಿದ್ಯಾರ್ಥಿ

ಗಳು ಇರುವ ಹಾಸ್ಪಲ್‌ಗಳಿಗೆ ಭೇಟಿ ಕೊಟ್ಟು ಅಲ್ಲಿರುವ ಲೋಪದೋಷಗಳ ಬಗ್ಗೆ ವರದಿ ಕೊಡಬೇಕೆಂದು ತಿಳಿಸಿದ್ದೇವೆ. ಅಲ್ಲಿರುವಂತಹ ಲೋಪದೋಷಗಳನ್ನು ಹೋಗಲಾಡಿಸುವ ದೃಷ್ಟಿಯಿಂದಲೇ ಈ ರೀತಿ ಮಾಡಿರುವುದು.

ಶ್ರೀ ಜೆ ಎಚ್. ಪಟೇಲ್.—ತಾವು ಇದರ ಬಗ್ಗೆ ಕಥೆ ಹೇಳುತ್ತಿದ್ದೀರಿ. ರುಕ್ಮಿಣಿಯಮ್ಮ ಎಂಬ ಹೆಸರಿನ ಹುಡುಗಿ ೧೯ನೇ ತಾರೀಖು ಬೆಳಿಗ್ಗೆ ಊಟ ಮಾಡಿ ಮನೆಗೆ ಹೋದಾಗ ವಾಂತಿ ಪ್ರಾರಂಭ ವಾಯಿತು ಎಂದು ಹೇಳಿದರಿ. ಆ ಹುಡುಗಿಯ ತಂದೆ ತಾಯಿಗಳು ಕೂಡಲೇ ಆ ಹುಡುಗಿಯನ್ನು ಆಸ್ಪತ್ರೆಗೆ ಸೇರಿಸಿದ್ದರೆ ಸಾಯದೆ ಉಳಿದುಕೊಳ್ಳುತ್ತಿದ್ದಳೆಂದು ಕಾಣುತ್ತದೆ. ಏಕೆಂದರೆ, ೨೧ನೇ ತಾರೀಖು ೧೨ ಜನ ಹುಡುಗಿಯರು ವಾಂತಿ ಮಾಡಿದ ಕೂಡಲೇ ಆಸ್ಪತ್ರೆಗೆ ಸೇರಿಸಿದ್ದರಿಂದ ಅವರೆಲ್ಲರೂ ಬದುಕಿ ಕೊಂಡಿದ್ದಾರೆ

೫-೦೦ ಪಿ. ಎಂ.

೧೯ನೇ ತಾರೀಖು ಊಟ ಮಾಡಿದ್ದು ೨೦ನೇ ತಾರೀಖು ಚಿಕಿತ್ಸೆ ಆಗದೇ ಇದ್ದುದರಿಂದ ಅವಳು ಸತ್ತಿದ್ದಾಳೆ. ಈ ಬಗ್ಗೆ ತಂದೆ ತಾಯಿಗಳ ಲೋಪದೋಷ ಇದ್ದರೂ ಸಹ ೨೧ನೇ ತಾರೀಖು ಫುಡ್ ಪಾಯಿಸನ್‌ನಿಂದ ಸತ್ತಿದ್ದಾಳೆ ಅಂತ ಹೇಳುತ್ತಾರೆ. ನಾನು ಹೇಳುವುದೇನೆಂದರೆ, ಆಕೆ ಇದರಿಂದ ಸತ್ತಿದ್ದಾಳೆ ಅಂತ ತಿಳಿದಿದ್ದರೂ ಕೂಡ ಅಲ್ಲಿ ಆಕ್ಕಿ ಕೊಟ್ಟರಲ್ಲಾ, ಅಲ್ಲಿ ಇದರ ಮೇಲ್ವಿಚಾರಕರು ಏನು ಇದ್ದಾರೆ, ಅವರ ಮೇಲೆ ಆಕ್ಷನ್ ತೆಗೆದುಕೊಳ್ಳಲಿಲ್ಲವೇ? ತಕ್ಷಣವೇ ಆ ಆಹಾರವನ್ನು ಬದಲು ಮಾಡಬೇಕಾಗಿತ್ತು, ಮಾಡಿದಿರಾ? ತಕ್ಷಣವಾಗಿ ಬೇರೆ ೧೨ ಹುಡುಗಿಯರಿಗೂ ಟ್ರೀಟ್‌ಮೆಂಟ್ ಕೊಡಿಸದೇ ಹೋಗಿದ್ದರೆ ಅವರೂ ಸಾಯುತ್ತಿದ್ದರೇನೋ? ಅಲ್ಲಿ ತರಕಾರಿಯಲ್ಲಿ ಏನಾದರೂ ವಿಶವಿಂಶ್ರಿತ ಇದ್ದಿತೋ ಏನೋ? ಆದೇನೇ ಇರಲಿ, ಈಗ ಆಗಿರುವಂಥಾ ತಪ್ಪಿಗೆ ಆ ತಪ್ಪಿತಸ್ಥರ ಮೇಲೆ ಕಾರ್ಯಕ್ರಮ ಕೈಗೊಳ್ಳುವುದಕ್ಕೆ ಏನು ಕಾರ್ಯಕ್ರಮ ಹಾಕಿ ಕೊಂಡಿದ್ದೀರಿ ಅನ್ನುವುದನ್ನು ಹೇಳುತ್ತೀರಾ ?

ಶ್ರೀ ಎ. ರಾಮಚಂದ್ರ.—ಆ ಜಿಲ್ಲೆಯ ಜಿಲ್ಲಾಧಿಕಾರಿಗಳು, ಸೋಷಿಯಲ್ ವೆಲ್‌ಫೇರ್ ಆಫೀಸರ್ ಮತ್ತು ಡಾಕ್ಟರ್ ಆ ಮಗುವಿನ ಮೇಲ್ವಿಚಾರಣೆ ನೋಡಿಕೊಳ್ಳಬೇಕಾಗಿತ್ತು. ಆ ಮಗು ತೀರಿ ಹೋಯಿತೂ ಎಂದು ತಮಗೆ ಗೊತ್ತಾದ ಮೇಲೆ ನೀವು ಆ ಹಾಸ್ಪಲ್‌ಗೆ ಹೋಗಿ ಸಂದರ್ಶನ ಏನಾದರೂ ಮಾಡಿದಿರಾ? ಅದರ ಸತ್ಯಾಂಶ ಏನು ಅಂತ ತಿಳಿದುಕೊಂಡು ಬಂದರಾ. ಅದರ ಬಗ್ಗೆ ಹೇಳುತ್ತೀರಾ?

ಶ್ರೀ ಪಿ. ವೆಂಕಟರಮಣ.—ನನಗೆ ಬೆಳಿಗ್ಗೆ ತಾನೇ ಈ ವಿಷಯ ಗೊತ್ತಾಯಿತು. ನಂತರ ಸಂಬಂಧ ಪಟ್ಟ ಜಿಲ್ಲಾಧಿಕಾರಿಗಳೊಂದಿಗೆ ಮಾತನಾಡಿದೆ. ತಾರೀಖು ೨೧-೨೨ರಂದು ಮುಖ್ಯ ಕಾರ್ಯದರ್ಶಿ ಗಳಿಗೂ ಹೋಮ್ ಸೆಕ್ರೆಟರಿಗೂ ಸಮಾಜ ಕಲ್ಯಾಣ ಇಲಾಖೆಯ ಕಾರ್ಯದರ್ಶಿಯವರಿಗೂ, ಮೈಸೂರು ಡಿವಿಷನಲ್ ಕಮೀಷನರಿಗೂ ಡೈರಕ್ಟರ್ ಆಫ್ ಸೋಷಿಯಲ್ ವೆಲ್‌ಫೇರ್ ಆಫೀಸರಿಗೂ ಮತ್ತು ಡೈರಕ್ಟರ್ ಆಫ್ ಫುಡ್ ಆಂಡ್ ಸಿವಿಲ್ ಸಪ್ಲೈಸ್ ಅವರಿಗೆ ಡೈರಕ್ಟ್ ಆಗಿ ಟೆಲೆಕ್ಸ್ ಮೆಸೇಜ್‌ಅನ್ನು ಕಳುಹಿಸಿದ್ದಾರೆ. ನನಗೆ ಈ ವಿಚಾರ ಬೆಳಿಗ್ಗೆ ತಾನೇ ಗೊತ್ತಾಯಿತು. ಈ ವಿಷಯವನ್ನು ಮಾನ್ಯ ಕಕ್ಕಿಲ್ಲಾಯರವರು ಶೂನ್ಯ ವೇಳೆಯಲ್ಲಿ ಎತ್ತಿದಾಗ ಅದಕ್ಕೆ ತಕ್ಷಣವೇ ಅದರ ಬಗ್ಗೆ ಸಂಪೂರ್ಣ ಮಾಹಿತಿ ಯನ್ನು ತರಿಸಿಕೊಂಡು ಉತ್ತರ ಹೇಳುತ್ತೇನೆ ಅಂತ ಹೇಳಿದ್ದರಿಂದ ಈಗ ಅದಕ್ಕೆ ಉತ್ತರ ಕೊಡಬೇಕಾ ಯಿತು. ಮತ್ತೆ ನಾನು ಸಂಬಂಧಪಟ್ಟ ಅಧಿಕಾರಿಗಳನ್ನು ಅಲ್ಲಿಗೆ ಕಳಿಹಿಸಿದ್ದೇನೆ, ಪೂರ್ಣ ವಿವರಗಳನ್ನು ತಿಳಿದುಕೊಂಡು ಬರುವಂತೆ ಹೇಳಿ ಕಳುಹಿಸಿದ್ದೇನೆ ಜಿಲ್ಲಾಧಿಕಾರಿಯವರಿಗೂ ಹೇಳಿದ್ದೇನೆ. ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳಿಗೂ ಹೇಳಿದ್ದೇನೆ. ನನಗೆ ಹೋಗಲು ಅವಕಾಶ ಸಿಕ್ಕಿಲ್ಲ, ಅದರಿಂದ ನಾನು ಹೋಗಿಲ್ಲಾ.

ಅಧ್ಯಕ್ಷರು.—ಮಾನ್ಯ ಜೆ. ಹೆಚ್. ಪಟೇಲರು ಕೇಳಿದ್ದು ಆಕೆ ೧೯ನೇ ತಾರೀಖು ಊಟ ಮಾಡಿ ಮನೆಗೆ ಹೋಗಿತ್ತಾಳೆ, ೨೦ನೇ ತಾರೀಖು ಸಂಜೆ ಅವಳನ್ನು ಆಸ್ಪತ್ರೆಗೆ ತೆಗೆದುಕೊಂಡು ಹೋಗಿದ್ದಾರೆ. ೨೦ನೇ ತಾರೀಖು ಸಂಜೆಯವರೆಗೆ ಆಕೆಗೆ ಯಾವ ವಿಧವಾದಂಥಾ ಉಪಚಾರವೂ ನಡೆದಿಲ್ಲಾ. ೨೧ನೇ ತಾರೀಖು ಸತ್ತಿದ್ದಾಳೆ. ಹೀಗಿದ್ದರೂ ಸಹ ೨೧ನೇ ತಾರೀಖು ಅಲ್ಲಿರುವ ಮಂಕ್ಕಳು ಮತ್ತೆ ಊಟ ಮಾಡಿ ಮಾಡಿದರಲ್ಲಾ, ಆದರಲ್ಲಿ ೧೨ ಹುಡುಗರನ್ನು ಒಂದು ಸಾರಿ ಆಸ್ಪತ್ರೆಗೆ ಕರೆದಂಕೊಂಡು ಹೋಗಿ ಸೇರಿಸಿ ದ್ದಾರೆ, ಮತ್ತೊಂದು ಸಾರಿ ೨೫ ಹುಡುಗರನ್ನು ಕರೆದುಕೊಂಡು ಹೋಗಿ ಸೇರಿಸಿದ್ದಾರೆ, ಮತ್ತೊಮ್ಮೆ ಇಬ್ಬರನ್ನು ಸೇರಿಸಿದ್ದಾರೆ. ೨೧ನೇ ತಾರೀಖಿನವರೆಗೂ ಆ ಹುಡುಗರಿಗೆ ಅನ್ನ ಹಾಕಿದರಲ್ಲಾ ಮತ್ತು

ಅಲ್ಲಿಯವರೆಗೂ ಅದರ ಮೇಲ್ವಿಚಾರಕರು ಯಾರು ಇದ್ದರು, ಅವರು ಸರಿಯಾಗಿ ಕೆಲಸ ಮಾಡದೇ ಬೇಜವಾಬ್ದಾರಿಯಿಂದ ವರ್ತಿಸಿದ್ದು ತಪ್ಪಲ್ಲವೇ ಎಂದು ಅವರು ಕೇಳುತ್ತಿದ್ದಾರೆ.

ಶ್ರೀ ಪಿ. ವೆಂಕಟರಮಣ —ಆ ಮಗು ೧೯ನೇ ತಾರೀಖು ಊಟ ಮಾಡಿಕೊಂಡು ಮನೆಗೆ ಹೋಗಿದೆ ೨೦ನೇ ತಾರೀಖು ಆ ಮಗುವನ್ನು ಆಸ್ಪತ್ರೆಗೆ ಸೇರಿಸಿದ್ದಾರೆ. ೨೧ನೇ ತಾರೀಖು ಆ ಮಗು ಸತ್ತಿದೆ. ಇಷ್ಟಾದರೂ ಸಹ ತಾವು ಏತಕ್ಕೆ ಕ್ರಮ ಕೈಗೊಳ್ಳಲಿಲ್ಲ ಎಂದು ಮಾನ್ಯ ಸದಸ್ಯರು ಕೇಳಿದ್ದಾರೆ. ನಮಗೆ ವಿಷಯ ಗೊತ್ತಾದ ತಕ್ಷಣ ಸಂಬಂಧಪಟ್ಟವರ ಮೇಲೆ ತಕ್ಷಣ ಕ್ರಮ ಕೈಗೊಂಡಿದ್ದೇವೆ.

ಅಧ್ಯಕ್ಷರು.—ಅವರು ಕೇಳಿದ್ದು ೨೧ನೇ ತಾರೀಖು ೧೧ ಗಂಟೆಗೆ ಆ ಮಗು ಸತ್ತಿದ್ದರೂ ಸಹ ಮತ್ತೆ ಅದೇ ದಿವಸ ಹಾಸ್ಪಲ್‌ನಲ್ಲಿ ಊಟ ಮಾಡಿಕೊಂಡ ಹುಡುಗರು ವಾಂತಿ ಮಾಡಿದರಲ್ಲಾ ಆಗ ಅಲ್ಲಿರು ವರ್ಯಾರೂ ಎಚ್ಚರಿಕೆ ತೆಗೆದುಕೊಳ್ಳಲಿಲ್ಲವೇ ಎಂದು.

ಶ್ರೀ ಕೆ. ಭಾಸ್ಕರನಾಯಿಡು.—ಮಾನ್ಯ ಮಂತ್ರಿಗಳು ಆ ಜಿಲ್ಲೆಗೆ ಸಂಬಂಧಪಟ್ಟ ಮಂತ್ರಿಯವರ ನ್ನಾದರೂ ಕರೆದುಕೊಂಡು ಹೋಗಿ ಆಲ್ಲಿನ ವಿಚಾರಗಳನ್ನು ತಿಳಿದುಕೊಂಡು ಕರೆಕ್ಟ್‌ಆಗಿ ಹೇಳುವುದು ಒಳ್ಳೆಯದು.

ಶ್ರೀ ಪಿ. ವೆಂಕಟರಮಣ.—ಮಕ್ಕಳಿಗೆ ಊಟ ಕೊಡಬೇಕಾದರೆ ಬೆಳಿಗ್ಗೆ ೭ ಗಂಟೆಗೆ ಸಾಮಾನು ಗಳನ್ನು ಅವರು ಕೊಡಬೇಕಾಗುತ್ತದೆ. ಇದು ತಮಗೆ ಗೊತ್ತಿದೆ. ಆ ಮಗು ಸತ್ತಿದ್ದು ೨೧ನೇ ತಾರೀಖು ೧೧–೫೦ಕ್ಕೆ ಆ ಹುಡುಗರು ೧೦–೧೦½ ಗಂಟೆಗೆ ಊಟ ಮಾಡಿಕೊಂಡು ಹಾಸ್ಪಲನ್ನು ಬಿಡ ಬೇಕಾಗುತ್ತದೆ.

ಶ್ರೀ ಬಿ. ಬಿ. ಕಕ್ಕಿಲಾಯ.—ಆ ಮಗುವನ್ನು ೨೦ನೇ ತಾರೀಖು ಆಸ್ಪತ್ರೆಗೆ ಸೇರಿಸಿದ್ದು ತಮಗೆ ಗೊತ್ತಿರಬೇಕಲ್ಲಾ.

ಶ್ರೀ ಪಿ. ವೆಂಕಟರಮಣ.—೧೯ನೇ ತಾರೀಖು ಊಟ ಮಾಡಿ ಆ ರಾತ್ರಿಯೇ ಹಳ್ಳಿಗೆ ಹೊರಟು ಹೋದಳು.

ಶ್ರೀ ಜೆ. ಹೆಚ್. ಪಟೇಲ್.—೨೦ನೇ ತಾರೀಖು ಅವಳು ಊಟ ಮಾಡಲಿಲ್ಲವೇ?

ಶ್ರೀ ಪಿ. ವೆಂಕಟರಮಣ.—೨೦ನೇ ತಾರೀಖು ಅವಳನ್ನು ಕರೆದುಕೊಂಡೂ ಬಂದು ಆಸ್ಪತ್ರೆಗೆ ಸೇರಿ ಸಿದರು, ೨೧ನೇ ತಾರೀಖು ೧೧–೫೦ಕ್ಕೆ ಸತ್ತಿದ್ದಾಳೆ. ೨೧ನೇ ತಾರೀಖು ಅಕ್ಕಿ ಕೊಡಬೇಕಾದರೆ ಬೆಳಿಗ್ಗೆ ೭ ಗಂಟೆಗೆ ಕೊಟ್ಟರೇನೇ ಆ ಹುಡುಗರಿಗೆ ೧೦ ಗಂಟೆ ಒಳಗೆ ಅನ್ನ ವಗೈರೆ ಕೊಡಬಹುದು. ಅನಂತರ ೧೦–೩೦ಕ್ಕೆ ಸ್ಕೂಲ್‌ಗೆ ಹೋಗಬಹುದು. ಇಲ್ಲಿಗೆ ನಾವು ಇಲ್ಲಿ ಸರಿಯಾದ ಕ್ರಮ ತೆಗೆದುಕೊಂಡಿದ್ದೇವೆ ಎಂದು ಹೇಳುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್.—ಇದು ಇನ್ನೂ ರಹಸ್ಯವಾದುದು. ೧೯ನೇ ತಾರೀಖು ಊಟ ಮಾಡಿದ ಮೇಲೆ ಅವಳು ಊರಿಗೆ ಹೋದಳು, ೨೦ನೇ ತಾರೀಖು ಬರಲಿಲ್ಲಾ ೨೧ನೇ ತಾರೀಖು ಸತ್ತಿ ದ್ದಾಳೆ, ೧೯ನೇ ತಾರೀಖಿನಿಂದ ೨೧ನೇ ತಾರೀಖಿನವರೆಗೂ ಊಟ ಮಾಡಿದ ಹುಡುಗರಿಗೆ ಯಾರಿಗೂ ಏನೂ ಆಗಲಿಲ್ಲವೆ?

ಶ್ರೀ ಪಿ. ವೆಂಕಟರಮಣ.—ಏನೂ ಆಗಲಿಲ್ಲ. ೨೧ನೇ ತಾರೀಖು ಆ ವಿದ್ಯಾರ್ಥಿನಿ ಸತ್ತಿರುವುದರ ಬಗ್ಗೆ ನಾವು ಕೆಮಿಕಲ್ ಅನಾಲಿಸಿಸ್‌ಗೆ ಕಳುಹಿಸಿದ್ದೇವೆ. ಅದರ ವರದಿ ಬಂದಿಲ್ಲಾ, ಮತ್ತೆ ಡಿವಿಷನಲ್ ಕಮೀಷನರನ್ನು ತನಿಖೆ ಮಾಡಬೇಕು ಎಂದು ಹೇಳಿದ್ದೇವೆ, ಅವರೂ ಸಹ ಹೋಗಿ ನೋಡಿ ನಮಗೆ ವರದಿ ಕಳುಹಿಸುತ್ತಾರೆ.

ಶ್ರೀ ಸಿ. ಎ. ಚಂದ್ರೇಗೌಡ.—೨೧ನೇ ತಾರೀಖು ಆ ಮಗು ಸತ್ತುಹೋದ ಮೇಲೆ ಸಂಬಂಧ ಪಟ್ಟವರ ಮೇಲೆ ತಾವೇನು ಆಕ್ಷನ್ ತೆಗೆದುಕೊಂಡಿರಿ?

ಶ್ರೀ ಪಿ. ವೆಂಕಟರಮಣ.—ಇದರ ಬಗ್ಗೆ ತನಿಖೆ ಮಾಡಿ ಅಸಿಸ್ಟೆಂಟ್ ಕಮೀಷನರ್‌ಗೆ ಬರೆ ದಿದ್ದಾರೆ. ಜಿಲ್ಲಾಧಿಕಾರಿಗಳಿಂದ ನಮಗೆ ರೈಟಿಂಗ್‌ನಲ್ಲಿ ಬಂದಿದೆ, ಟೆಲಿಗ್ರಾಮ್ಸ್ ಮೆಸೇಜ್ ಸಹ ಬಂದಿದೆ. ಈ ಒಂದು ಆಧಾರದ ಮೇಲೆ ನಾನು ಹೇಳುತ್ತಿದ್ದೇನೆ. ಮಾನ್ಯ ಸದಸ್ಯರಿಗೇನಾದರೂ ಪ್ರೈವೇಟ್ ಆಗಿ ಮಾಹಿತಿಗಳಿದ್ದರೆ ಅದನ್ನೂ ಹೇಳಲಿ, ಮತ್ತೊಮ್ಮೆ ನಾನು ವಿವರಿಸಿ ಪ್ರಾಡಿಸುತ್ತೇನೆ.

ಶ್ರೀ ಸಿ. ಎ. ಚಂದ್ರೇಗೌಡ.—ನಾನು ಪ್ರಜಾಪ್ರತಿನಿಧಿಗಳಿಂದ ಆರಿಸಿ ಬಂದಂಥಾ ಸದಸ್ಯ. ನಾನು ಅಧಿಕಾರಿಗಳ ಜೊತೆಯಲ್ಲಿ ಮಾತನಾಡುವುದಕ್ಕೆ ತಯಾರಿಲ್ಲಾ. ಇದಕ್ಕೆ ಸಂಬಂಧಪಟ್ಟವರು ನನ್ನ ಕ್ಷೇತ್ರದ ಜನರು ಕೊಟ್ಟಂಥಾ ಮಾಹಿತಿ ಆಧಾರದ ಮೇಲೆ ನಾನು ಮಾತನಾಡುತ್ತೇನೆ.

ಶ್ರೀ ಪಿ. ವೆಂಕಟರಮಣ.—ಶ್ರೀಮಾನ್ ಕಕ್ಕಿಲಾಯರವರು ಇದು ಜನತಾ ಬಜಾರ್‌ನಿಂದ ತಂದಂಥಾ ಅಕ್ಕಿ ಅಲ್ಲಿಗೆ ಹೋಗಿ ಈ ಅಕ್ಕಿಯನ್ನು ಏತಕ್ಕೆ ಸೀಜ್ ಮಾತಲಿಲ್ಲಾ ಎಂದು ಕೇಳಿದ್ದಾರೆ. ನಾನು ಅದನ್ನು ಮತ್ತೊಮ್ಮೆ ಪರಿಶೀಲಿಸಿ ಅದರ ಬಗ್ಗೆ ಕೂಲಂಕುಷವಾಗಿ ತನಿಖೆ ಮಾಡಿಸುತ್ತೇನೆ. ಈ ಬಗ್ಗೆ ಒಂದು ವರದಿ ಕೊಡಬೇಕೆಂದು ನಾನು ಡಿವಿಷನಲ್ ಕಮಿಷನರಿಗೆ ಸಲಹೆ ಮಾಡುತ್ತೇನೆ. ಮತ್ತೆ ಸಂಬಂಧಪಟ್ಟವರಿಗೆ ಸರಿಯಾದ ಪರಿಹಾರ ಒದಗಿಸಿ ಕೊಡಬೇಕೆಂದು ಹೇಳಿದರೆ, ಅದೂ ಸಹ ಒಳ್ಳೆಯ ಸಲಹೆ, ಅಲ್ಲಿ ಊಟದ ವ್ಯವಸ್ಥೆಯನ್ನು ಪರಿಶೀಲಿಸಿ, ಆಹಾರದ ವಿಚಾರದಲ್ಲೂ ತಕ್ಕ ವ್ಯವಸ್ಥೆ ಮಾಡ ಬೇಕೆಂದು ಹೇಳಿದ್ದಾರೆ, ಅದನ್ನೆಲ್ಲಾವನ್ನೂ ನಾನು ಒಪ್ಪಿಕೊಳ್ಳುತ್ತೇನೆ. ಇದೇರೀತಿಯಾಗಿ ಯಾರಾದರೂ ಉತ್ತಮವಾದ ಸಲಹೆಗಳನ್ನು ಕೊಟ್ಟರೆ ನಾನು ಅವೆಲ್ಲವನ್ನೂ ಸಹ ಸ್ವಾಗತಿಸುತ್ತೇನೆ. ಇನ್ನು ಶ್ರೀಮಾನ್ ಪಂಪಾತಿಯವರು ಒಂದು ವಿಷಯ ಹೇಳಿದ್ದಾರೆ, ಅದೇನೆಂದರೆ ಹಾಸ್ಟಲುಗಳಿಗೆ ಮಾನ್ಯ ಮಂತ್ರಿಗಳು ಖುದ್ದಾಗಿ ಹೋಗಿ ನೋಡಬೇಕು, ಅದು ಯಾವರೀತಿಯಾಗಿ ನಡೆಯುತ್ತದೆ ಅನ್ನುವುದನ್ನು ನೋಡ ಬೇಕು ಎಂದು ಹೇಳಿದ್ದಾರೆ ಅದೂ ಕೂಡ ಒಳ್ಳೆಯ ಸಲಹೆ. ಆ ಕೆಲಸವನ್ನೂ ಕೂಡ ನಾನು ಮಾಡು ತ್ತೇನೆಂದು ಭರವಸೆ ಕೊಡುತ್ತೇನೆ. ಇನ್ನು ಮಾನ್ಯ ಸದಸ್ಯರಾದ ಭೈರಿಯವರು ಕೆಲವು ವಿಚಾರಗಳನ್ನು ಹೇಳಿದ್ದಾರೆ. ಮಾನ್ಯ ಸದಸ್ಯರುಗಳು ಯಾರೇ ಆಗಲಿ, ಇರತಕ್ಕಂಥ ಕಂಪ್ಲೈಟ್ಸ್‌ನ್ನು ಸರ್ಕಾರದ ಗಮನಕ್ಕೆ ತಂದರೆ, ನಾನು ಖಂಡಿತವಾಗಿಯೂ ಅದನ್ನು ವೆರಿಫೈ ಮಾಡಿಸುತ್ತೇನೆ ಹಾಗೂ ಅದನ್ನು ಪರಿಶೀಲಿ ಸುತ್ತೇನೆಂದು ಈ ಸಂದರ್ಭದಲ್ಲಿ ಭರವಸೆ ಕೊಡುತ್ತೇನೆ. ಇನ್ನು ಶ್ರೀಮತಿ ಸುಶೀಲಾ ಚಿಲುವರಾಜ್ ಅವರು ಪಾತ್ರೆಗಳಲ್ಲಿ ಕಲಾಯಿ ಇರುವುದಿಲ್ಲ. ಆದರಿಂದ ಹೀಗಾಗುತ್ತದೆ ಎಂದು ಹೇಳಿದ್ದಾರೆ. ನಾವು ಹಾಸ್ಟಲುಗಳನ್ನು ಪ್ರಾರಂಭಮಾಡತಕ್ಕಂಥಾ ಕಾಲದಲ್ಲಿ ಅಲ್ಲಿಗೆ ಪಾತ್ರೆಗಳನ್ನು ಕೊಡುವಾಗ ಕಲಾಯಿ ಮಾಡಿಸಿ ಕೊಡುತ್ತೇವೆ, ಆದರಲ್ಲಿ ಅಡಿಗೆ ಮಾಡುತ್ತಾರೆ. ಆದ್ದರಿಂದ ಈ ಒಂದು ಸಂಶಯವನ್ನು ಏನು ವ್ಯಕ್ತಪಡಿಸಿದ್ದಾರೆ ಅದನ್ನು ಬಿಟ್ಟು ಮಿಕ್ಕ ವಿಚಾರದಲ್ಲಿ ಸಾಕಷ್ಟು ಗಮನ ಕೊಡುತ್ತೇನೆಂದು ಹೇಳು ತ್ತೇನೆ. ಇನ್ನು ಶ್ರೀಮತಿ ಮೋಟಮ್ಮನವರು ಕೆಲವೊಂದು ಮಾತನ್ನು ಹೇಳಿದರು. ಇದು ಮಾನ್ಯ ಸಿ. ಎ. ಚಂದ್ರೇಗೌಡರ ಕ್ಷೇತ್ರವಾಗಿರುವುದರಿಂದ ಅಲ್ಲಿಯ ಪರಿಸ್ಥಿತಿಯನ್ನು ನನ್ನ ಗಮನಕ್ಕೆ ತಂದಿದ್ದಾರೆ. ಈ ಬಗ್ಗೆ ಸೂಕ್ತ ಕಾರ್ಯಕ್ರಮ ಕೈಗೊಳ್ಳಬೇಕು ಎಂದು ಹೇಳಿದ್ದಾರೆ, ಆ ಬಗ್ಗೆ ಸೂಕ್ತ ಕಾರ್ಯಕ್ರಮ ಕೈಗೊಳ್ಳುತ್ತೇನೆ ಎಂದು ಭರವಸೆ ಕೊಡುತ್ತೇನೆ.

ಶ್ರೀ ಜೆ. ಎಚ್. ಪಟೇಲ್.—ಮಾನ್ಯ ಮಂತ್ರಿಗಳು ಹೇಳುವ ಪ್ರಕಾರ, ಅಲ್ಲಿಗೆ ಬೇರೆಯವರು ಅಂದರೆ, ಮಾನ್ಯ ಚಂದ್ರೇಗೌಡರು, ಮೋಟಮ್ಮನವರು ಹೋಗಿ ನೋಡದೆ ಇದ್ದುದು ಅವರ ತಪ್ಪು, ತಾವೇನು ನೋಡಬೇಕಾದ್ದು ಇಲ್ಲ ಎನ್ನುವುದಾಗಿದೆ.

ಶ್ರೀ ಸಿ ಎ. ಚಂದ್ರೇಗೌಡ.—ನಾವು ಡಿಸ್ಟ್ರಿಕ್ಟ್ ಲೆವೆಲ್ ಕಮಿಟಿಯಲ್ಲಿ ಈ ವಿಷಯವನ್ನು ಅನೇಕ ಸಾರಿ ಪ್ರಸ್ತಾಪ ಮಾಡಿರುತ್ತೇವೆ. ಉತ್ತಮ ವ್ಯವಸ್ಥೆ ಇಲ್ಲಿಯ ಮಕ್ಕಳಿಗೆ ಧೊರಕಬೇಕು ಎನ್ನುವುದರ ಬಗ್ಗೆ, ನಾನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಪಿ ವೆಂಕಟರಮಣ.—ಈ ಘಟನೆಯನ್ನು ತನಿಖೆ ಮಾಡಿಸಿ ವರದಿಯನ್ನು ತರಿಸಿಕೊಂಡು ಅಗತ್ಯಬಿದ್ದರೆ ನಾವೇ ಖುದ್ದಾಗಿ ಹೋಗುತ್ತೇನೆ. ಮಾನ್ಯಸದಸ್ಯರು ಯಾವ ರೀತಿಯ ಕಳಕಳಿಯನ್ನು ವ್ಯಕ್ತ ಮಾಡಿದ್ದಾರೆ, ಆ ಬಗ್ಗೆ ನಿಜವಾಗಿಯೂ ಕ್ರಮ ತೆಗೆದುಕೊಂಡು ಸೂಕ್ತ ಅನುಕೂಲಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ

ಶ್ರೀಮತಿ ಅನುಸೂಯ ಗಜಾನನ ಶರ್ಮ. —ನಾನು ಎಷ್ಟೋ ಸಾರಿ ಈ ಹಾಸ್ಟಲ್‌ಗಳಿಗೆ ಭೇಟಿ ಕೊಟ್ಟಿರುತ್ತೇನೆ. ಅಲ್ಲಿರುವ ಮುಖ್ಯ ದೋಷ ಎಂದರೆ ಅಡಿಗೆ ಮಾಡಿದ ಮೇಲೆ ಪಾತ್ರೆಗಳನ್ನು ಸರಿಯಾಗಿ ಮುಚ್ಚಿಡುವುದಿಲ್ಲ. ಹಾಗೆ ಹಾಗೆ ಮುಚ್ಚಿಡದೆ ಇದ್ದಾಗ ಪಲ್ಲಿ ಏನಾದರೂ ಆ ಪಾತ್ರೆಯಲ್ಲಿ ಬಿದ್ದು ಈ ಅನಾಹುತವಾಗಿರಬಹುದು ಎಂದು ನನಗನ್ನಿಸುತ್ತದೆ.

ಶ್ರೀ ಪಿ. ರ ಮದೇವ್.—ಅಲ್ಲಿ ಮುಚ್ಚಿಡುವುದಕ್ಕೆ ಏನಾದರೂ ಇದ್ದರೆ ತಾನೆ

ಶ್ರೀ ಪಿ. ವೆಂಕಟರಮಣ.—ಮಾನ್ಯ ಸದಸ್ಯರಿಬ್ಬರು ಹೇಳತಕ್ಕ ಸಲಹೆಯನ್ನು ನಾವು ನಿರಾಕರಣೆ ಮಾಡುವುದಕ್ಕೆ ಸಾಧ್ಯವಿಲ್ಲ. ಹೋದ ವರ್ಷ ಚಿನ್ನಪಟ್ಟಣ ಹಾಸ್ಪಲ್‌ನಲ್ಲಿಯೂ ಈ ತರಹ ಆಗಿತ್ತು. ಪ್ರತಿಯೊಂದು ಹಾಸ್ಪಲ್‌ನ ಅಧಿಕಾರಿಗಳಿಗೆ ನಾವು ಈ ರೀತಿ ಯಾಗಿ ಸೂಚನೆಯನ್ನು ಕೊಟ್ಟು, ಮಾಡಿದಂಥ ಪದಾರ್ಥವನ್ನು ಸರಿಯಾಗಿ ಮುಚ್ಚಿಡಲಿಕ್ಕೆ ಏನೋ ಬೇಕೋ ಅದನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ, ಮತ್ತು ಇನ್ನು ಮುಂದೆ ಈರೀತಿಯಾಗಿ ಲೋಪದೋಷಗಳು ಆಗದ ಹಾಗೆ ನೋಡಿ ಕೊಳ್ಳುತ್ತೇವೆ.

SRI K. BASKAR NAIDU.—Are the parents of the child will be given any compensation as was done in the case of those who died due to illicit liquor consumption ? If not paid, I request the Govt. to pay compensation to the parents.

ಶ್ರೀ ಪಿ. ವೆಂಕಟರಮಣ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಬಂದನಂತರ ಅವರ ಜೊತೆಯಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡಿ ಅವರಿಗೆ ಎಷ್ಟು ಪರಿಹಾರಧನ ಕೊಡಬೇಕು ಎನ್ನುವುದನ್ನು ನಿರ್ಧಾರ ಮಾಡುತ್ತೇವೆ. ಈಗ ಸದ್ಯಕ್ಕೆ ಇವರ ಮನೆಯವರಿಗೆ ಐದು ಸಾವಿರ ರೂಪಾಯಿಗಳ ಪರಿಹಾರಧನವನ್ನು ಕೊಡುತ್ತೇವೆ.

MATTER UNDER RULE 312

Reg Agitation by Beedi workers of Mangalore

ಶ್ರೀ ಬಿ. ವಿ. ಕಕ್ಕಿಲಾಯ (ಬಂಟ್ವಾಳ).—ಮಾನ್ಯ ಅಧ್ಯಕ್ಷರೇ, ಬೀಡಿ ಕಾರ್ಮಿಕರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಹಳ ಕಾಲದಿಂದ ಚಳುವಳಿಯನ್ನು ನಡೆಸುತ್ತಿದ್ದಾರೆ. ಇದು ಏಕೆ ಎಂದರೆ, ತಾವು ಬೀಡಿ ಕಾರ್ಮಿಕರಿಗೆ ಅನೇಕ ಕಾನೂನುಗಳನ್ನು ಮಾಡಿ ಜಾರಿಗೆ ಕೊಟ್ಟಿದ್ದೀರಿ. ಆದರೆ ಮಾಲೀಕರುಗಳು ಸರ್ಕಾರದವರು ಮಾಡಿದಂಥ ಕಾನೂನನ್ನು ಜಾರಿಗೆ ಕೊಡದೆ ಸುಪ್ರೀಂಕೋರ್ಟಿವರೆಗೆ ಹೋಗಿ ಈ ಕಾನೂನುಗಳು ಜಾರಿಗೆ ಬರದ ಹಾಗೆ ತಡೆ ಆಜ್ಞೆ ತಂದಿದ್ದಾರೆ. ಕಾರ್ಮಿಕರ ಕ್ಷೇಮ ನಿಧಿಯ ಬಗ್ಗೆ ಕೇಂದ್ರ ಸರ್ಕಾರದವರು, ರಾಜ್ಯ ಸರ್ಕಾರದವರು ಒಂದು ಆಜ್ಞೆಯನ್ನು ಹೊರಡಿಸಿದ್ದಾರೆ. ಇದನ್ನೂ ಸಹ ಬೀಡಿ ಕಾರ್ಖಾನೆಯ ಮಾಲೀಕರು ಸುಪ್ರೀಂ ಕೋರ್ಟಿಗೆ ಹೋಗಿ ತಡೆ ಆಜ್ಞೆ ತಂದಿದ್ದಾರೆ. ಇವರಲ್ಲಿ ಕೆಲವರು ಕಾರ್ಮಿಕರಿಂದ ಕ್ಷೇಮನಿಧಿಗೆ ಹಣವನ್ನು ವಸೂಲು ಮಾಡುವುದಿಲ್ಲ, ಮಾಡಿದರೂ ಅದನ್ನು ಪಾವತಿ ಕೂಡ ಮಾಡುವುದಿಲ್ಲ. ಇನ್ನು ಕೆಲವರು ಏನು ಮಾಡುತ್ತಾರೆ, ಕಾರ್ಮಿಕರಿಂದ ಏನು ಹಣವನ್ನು ಇವಕ್ಕಾಗಿ ವಸೂಲು ಮಾಡುತ್ತಾರೆ, ಅದು ಇಷ್ಟು ಜಮಾ ಆಗಿದೆ ಎಂದು ಹೇಳುವುದಿಲ್ಲ. ಕಾನೂನು ಪ್ರಕಾರ ಕಾರ್ಮಿಕರ ವೇತನದಿಂದ ಕಡಿತ ಮಾಡಿದ ಹಣವನ್ನು ಸಂಬಂಧ ಪಟ್ಟ ಕಚೇರಿಗೆ ಪಾವತಿ ಮಾಡಿದ್ದೇವೆಂದು ಒಂದು ರಶೀದಿಯನ್ನು ಕಾರ್ಮಿಕರಿಗೆ ಕೊಡಬೇಕು ಆದರೆ ಇವರು ಈ ರೀತಿ ಮಾಡುವುದಿಲ್ಲ, ಹೀಗಾಗಿ ಕಾರ್ಮಿಕರಿಗೆ ತಮ್ಮ ವೇತನದಿಂದ ಕ್ಷೇಮನಿಧಿಗೆ ಇಷ್ಟು ಹಣಪಾವತಿಯಾಗಿದೆ ಎನ್ನುವ ಲೆಕ್ಕವೇ ಸಿಕ್ಕದಂತಾಗಿದೆ. ಆದ್ದರಿಂದಲೇ ಕಾರ್ಮಿಕರು ಈ ಒಂದು ಬೇಡಿಕೆಯನ್ನು ಮಾಲೀಕರ ಮುಂದೆ ಇಟ್ಟು ನಮ್ಮ ವೇತನದಿಂದ ಕ್ಷೇಮ ನಿಧಿಗೆ ಇಷ್ಟು ಹಣ ಪಾವತಿಯಾಗಿದೆ ಎನ್ನುವ ಮಾಹಿತಿಯನ್ನು ನಮಗೆ ಕೊಡಬೇಕು ಎಂದು ಅವರು ಚಳವಳಿ ನಡೆಸುತ್ತಿದ್ದಾರೆ. ಇನ್ನೂ ಒಂದು ತರಹದ ಮಾಲೀಕರು ಅಲ್ಲಿದ್ದಾರೆ. ಇವರೇನು ಮಾಡುತ್ತಾರೆಂದರೆ, ವೇತನದಲ್ಲಿ ಇದಕ್ಕಾಗಿ ಹಣವನ್ನು ಕಡಿತ ಮಾಡುವುದಿಲ್ಲ, ಸರ್ಕಾರದ ಖಜಾನೆಗೆ ತುಂಬುವುದೂ ಇಲ್ಲ. ಇದು ಕಾನೂನು ಬಾಹಿರವಾದ ಕೆಲಸ. ಪೇಮೆಂಟ್ ಆಫ್ ವೇಜಸ್ ಆಕ್ಟ್ ಪ್ರಕಾರ ಎಷ್ಟು ಹಣವನ್ನು ಸರ್ಕಾರದ ಖಜಾನೆಗೆ ಕಟ್ಟಬೇಕೋ ಅಷ್ಟು ಕಟ್ಟದ ಹೊರತು ಬೇರೆ ಹಣವನ್ನು ಪಜಾ ಮಾಡುವ ಹಾಗಿಲ್ಲ. ಕಡಿತ ಮಾಡಿದ ಹಣವನ್ನು ಕಚೇರಿಗೆ ತುಂಬದೆ ಮಾಲೀಕರೇ ನುಂಗುವ ಕ್ರಮ ಕಳೆದ ಐದು ವರ್ಷಗಳಿಂದ ನಡೆದು ಬಂದಿದೆ. ನಮ್ಮ ಅಂದಾಜಿನ ಪ್ರಕಾರ ಸುಮಾರು ೬ ಕೋಟಿ ರೂಪಾಯಿಗಳ ಕಾರ್ಮಿಕರ ಹಣವನ್ನು ಬೀಡಿ ಕಾರ್ಖಾನೆಯ ಮಾಲೀಕರು ತಮ್ಮ ಕೈಯಲ್ಲಿಟ್ಟುಕೊಂಡಿದ್ದಾರೆ. ಇವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಎಂದೇ ಕಾರ್ಮಿಕರು ಚಳುವಳಿಯನ್ನು ನಡೆಸುತ್ತಿದ್ದಾರೆ. ಆದರೂ ಸರ್ಕಾರದವರು ಇವರ ಬಗ್ಗೆ ಯಾವ